ಜನಮನದ ದನಿ

ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

ಫಿಫಾ ವಿಶ್ವಕಪ್-2026ರ ಸೆಮಿಫೈನಲ್ ಪಂದ್ಯದಲ್ಲಿ ಬಲಿಷ್ಠ ಫ್ರಾನ್ಸ್ ತಂಡವನ್ನು 2-0 ಅಂತರದಲ್ಲಿ ಸೋಲಿಸಿದ ಸ್ಪೇನ್ ಪ್ರತಿಷ್ಠಿತ ಟೂರ್ನಿಯಲ್ಲಿ 16 ವರ್ಷಗಳ ಬಳಿಕ ಫೈನಲ್ ಪ್ರವೇಶಿಸಿದೆ.

16 ಜುಲೈ, 2026 ಗುರುವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 125 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ನಾವ್ಯಾರೂ ಮನುಷ್ಯರಲ್ಲ... ಕೇವಲ ಕಂಟೆಂಟ್‌ಗಳು ! » 2

ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಉಚಿತ ಪ್ರವೇಶ » 3

ಬೀದಿ ಬದಿ ವ್ಯಾಪಾರಿಗಳಿಗೆ ಸ್ವರೂಪ್ ಅಭಯ » 4

ನನ್ನನ್ನು ಜೈಲಿಗೆ ಕಳುಹಿಸುವ ಪ್ರಯತ್ನ

ಹೆಚ್.ಡಿ.ಕೆ. ವಿರುದ್ಧ ಡಿ.ಕೆ.ಶಿವಕುಮಾರ್ ಆರೋಪ

• ಪ್ರಜೋದಯ ವರದಿ

ಬೆಂಗಳೂರು : ನಾನು ಮುಖ್ಯಮಂತ್ರಿ ಆಗಿದ್ದಕ್ಕೆ ಕೆಲವರಿಗೆ ನಿದ್ದೆಯೇ ಬರುತ್ತಿಲ್ಲ. ನನ್ನನ್ನು ಜೈಲಿಗೆ ಕಳುಹಿಸುವ ಪ್ರಯತ್ನ ಮಾಡುತ್ತಿದ್ದಾರೆಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ವಿರುದ್ಧ ಗಂಭೀರ ಆರೋಪ ಮಾಡಿದ್ದಾರೆ.

ವಿಧಾನಸೌಧದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಿ.ಕೆ.ಶಿವಕುಮಾರ್ ಅವರು ಜೈಲಿಗೆ ಹೋಗುವ ದಿನ ಸನ್ನಿಹಿತವಾಗಿದೆ ಎಂದು ಹೆಚ್.ಡಿ. ಕುಮಾರಸ್ವಾಮಿ ಅವರು ಮಾಧ್ಯಮಗಳ ಮುಂದೆ ಹೇಳಿದ್ದನ್ನು ನೋಡಿದ್ದೇನೆ, ನನಗೇನು ಜೈಲು ಅನುಭವ ಹೊಸದಲ್ಲ, ಅವರ ಇಚ್ಛೆಯಂತೆ ಆಗುವುದಾದರೆ ಆಗಲಿ, ನನ್ನನ್ನು ಜೈಲಿಗೆ ಕಳುಹಿಸಲು ಏನೇನು ಕುತಂತ್ರ ಮಾಡಿದರೆಂಬುದನ್ನೆಲ್ಲಾ ಮುಂದೆ ಹೇಳುತ್ತೇನೆ ಎಂದರು.

ಈ ಇಳಿ ವಯಸ್ಸಿನಲ್ಲಿ ದೇವೇಗೌಡರು ವಿಧಾನಸೌಧ ಮುಂದೆ ಬಂದು ಧರಣಿ ನಡೆಸುವ ಅಗತ್ಯವಿಲ್ಲ. ಬಿಡದಿ ಸುತ್ತಮುತ್ತ ರೈತ ಮಹಿಳೆಯರು, ತಾಯಂದಿರು ಅಧಿಕಾರಿಗಳಿಗೆ ಪೊರಕೆಯಿಂದ ಹೊಡೆಯುವ ಅಗತ್ಯವಿಲ್ಲ. ನನಗೆ ಬೇಕಾದರೆ ಹೊಡೆಯಲಿ, ಸಹಿಸಿಕೊಳ್ಳುತ್ತೇನೆ, ಬಲವಂತವಾಗಿ ರೈತರ ಜಮೀನನ್ನು ಕಿತ್ತುಕೊಳ್ಳುವುದಿಲ್ಲ. ರೈತರ ಮನವೊಲಿಸಲು ಪ್ರಯತ್ನಿಸಿದ್ದೇವೆ, ಇಚ್ಛೆಯುಳ್ಳವರು ಅವರ ಜಮೀನಿಗೆ ನ್ಯಾಯಬದ್ಧ ಬೆಲೆ ನೀಡಿ ಸರ್ಕಾರ ಜಮೀನು ತೆಗೆದುಕೊಳ್ಳುತ್ತದೆ, ಇಚ್ಛೆ ಇಲ್ಲದವರು ಜಮೀನು ನೀಡುವುದು ಬೇಡ ಎಂದರು.

ಟೌನ್‌ಶಿಪ್ ವಿಚಾರವಾಗಿ ವಸ್ತುನಿಷ್ಠ ವಿಚಾರವನ್ನು ಜನರ ಮುಂದೆ ತಿಳಿಸಬೇಕೆಂದು ಸುದ್ದಿಗೋಷ್ಠಿ ಕರೆದಿದ್ದೇನೆ. ನಾನು ರೈತನ ಮಗ, ವ್ಯವಸಾಯ ಮಾಡದಿದ್ದರೂ ಹುಟ್ಟಿನಿಂದ ಬೇಸಾಯಗಾರನ ಮಗ, ನನಗೆ ರೈತರ ಕಷ್ಟದ ಬಗ್ಗೆ ಅನುಭವವಿದೆ. ಬಿಡದಿ ಟೌನ್‌ಶಿಪ್ ಯೋಜನೆಯ ಪಿತಾಮಹಾ ನಾನಲ್ಲ ಎಂದರು.

ಭೂಸ್ವಾಧೀನ ಇದೇ ಮೊದಲಲ್ಲ

ಅಭಿವೃದ್ಧಿ ಯೋಜನೆಗಳಿಗಾಗಿ ಭೂಸ್ವಾಧೀನ ಮಾಡಿರುವುದು ಇದೇ ಮೊದಲಲ್ಲ. ಬೆಂಗಳೂರು ವಿಮಾನ ನಿಲ್ದಾಣ, ಕೃಷ್ಣಾ ಯೋಜನೆ ಹಾಗು ಹಾಸನ ಸೇರಿ ಹಲವು ಯೋಜನೆಗಳಿಗೂ ಭೂಸ್ವಾಧೀನ ಮಾಡಲಾಗಿತ್ತು. ಹೆಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿ ಹಾಗು ಬಿ.ಎಸ್. ಯಡಿಯೂರಪ್ಪ ಉಪಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ, 2006ರ ಜೂನ್ 28ರಂದು ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಮೂಲಕ ಪಿಪಿಪಿ ಮಾದರಿಯಲ್ಲಿ ಟೌನ್‌ಶಿಪ್ ಅಭಿವೃದ್ಧಿ ಪಡಿಸುವ ಯೋಜನೆ

» ನಾಲ್ಕನೇ ಪುಟದಲ್ಲಿ

ಬಿಡದಿ ನನ್ನ ಕನಸಿನ ಯೋಜನೆಯಲ್ಲ

ಬಿಡದಿ ಟೌನ್‌ಶಿಪ್ ಯೋಜನೆ ತಮ್ಮ ಕನಸಿನ ಯೋಜನೆ ಅಲ್ಲ. ಬಿಡದಿ ಯಲ್ಲಿ ನಡೆದ ಬೆಳವಣಿಗೆಗಳು ತಮ್ಮ ಮನಸ್ಸಿಗೆ ನೋವುಂಟು ಮಾಡಿವೆ. ರಾಜಕೀಯಕ್ಕಾಗಿ ರೈತರ ಬದುಕನ್ನು ಹಾಳು ಮಾಡಲು ದೊಡ್ಡ ಸಂಚು ನಡೆಯುತ್ತಿದೆ. ಬಿಡದಿ ಯೋಜನೆ ನನ್ನ ಕನಸಿನ ಯೋಜನೆ ಎಂದು ನಾನು ಎಂದಿಗೂ ಹೇಳಿಲ್ಲ. ರೈತರ ಮಗನೆಂದು ಕರೆಸಿಕೊಳ್ಳುವ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಬಿಟ್ಟು ಹೋದ ನಿರ್ಧಾರಗಳನ್ನು ನಾನು ಅನುಸರಿಸುತ್ತಿದ್ದೇನೆ. ಅವರು ಆರಂಭಿಸಿದ ಪ್ರಕ್ರಿಯೆಯನ್ನೇ ಮುಂದುವರಿಸುತ್ತಿದ್ದೇನೆಂದು ಡಿ.ಕೆ.ಶಿವಕುಮಾರ್ ಹೇಳಿದರು.

ಯೋಜನೆಗೆ 2 ತಿಂಗಳು ತಾತ್ಕಾಲಿಕ ಬ್ರೇಕ್

ಬಿಡದಿ ಟೌನ್‌ಶಿಪ್ ಯೋಜನೆಗೆ ಪರ-ವಿರೋಧ ಹೋರಾಟಗಳು ತೀವ್ರಗೊಂಡಿರುವ ಹೊತ್ತಿನಲ್ಲೇ ಯೋಜನೆಗೆ 2 ತಿಂಗಳು ತಾತ್ಕಾಲಿಕ ಬ್ರೇಕ್ ನೀಡಿದ್ದಾರೆ. ಸಂಪುಟ ಸಭೆಯಲ್ಲಿ ತೀರ್ಮಾನಿಸಿ ಸಮಿತಿಯೊಂದನ್ನು ರಚನೆ ಮಾಡಿ, 2 ತಿಂಗಳಲ್ಲಿ ವರದಿ ಪಡೆಯುತ್ತೇನೆ. ಇಷ್ಟ ಇದ್ದವರು ಭೂಮಿ ಕೊಡಲಿ ಎಂದು ಡಿ.ಕೆ.ಶಿವಕುಮಾರ್ ಹೇಳಿದರು.

ತಮಿಳುನಾಡಿಗೆ ನೀರು ಹರಿಸಲು ಸಾಧ್ಯವಿಲ್ಲ

• ಪ್ರಜೋದಯ ವರದಿ

ನವದೆಹಲಿ: ಕೆಆರ್‌ಎಸ್‌ನಿಂದ ತಮಿಳುನಾಡಿಗೆ ನೀರು ಹರಿಸಲು ಸಾಧ್ಯವಿಲ್ಲವೆಂದು ಕಾವೇರಿ ನೀರು ನಿಯಂತ್ರಣ ಸಮಿತಿ (ಸಿಡಬ್ಲ್ಯೂಆರ್‌ಸಿ) ಸಭೆಯಲ್ಲಿ ಕರ್ನಾಟಕ ವಾದಿಸಿದೆ.

ಬುಧವಾರ ನಡೆದ ಸಭೆಯಲ್ಲಿ ಅಧಿಕಾರಿಗಳು, ಕಾವೇರಿ ಜಲಾನಯನ ಪ್ರದೇಶದ ವಾಸ್ತವ ಸ್ಥಿತಿಯನ್ನು ಅಧಿಕಾರಿಗಳು ವಿವರಿಸಿದ್ದಾರೆ. ಹೀಗಿದ್ದರೂ ತಮ್ಮ ಪಾಲಿನ ನೀರು ಬಿಡುವಂತೆ ತಮಿಳುನಾಡು ವಾದಿಸಿದೆ. ಇದಕ್ಕೆ ಪ್ರತ್ಯುತ್ತರ ನೀಡಿರುವ ಕರ್ನಾಟಕ ನೀರು ಹರಿಸಲು ಸಾಧ್ಯವೇ ಇಲ್ಲವೆಂದು ತಿಳಿಸಿದೆ.

ಕಾವೇರಿ ಕೊಳ್ಳದಲ್ಲಿ ಮಳೆ ಅಭಾವ ಉಂಟಾಗಿದೆ. ಜೂನ್ ತಿಂಗಳಲ್ಲಿ ಜಲಾಶಯಗಳಿಗೆ ಶೂನ್ಯ ಒಳ ಹರಿವಿದ್ದು, ಜುಲೈ ತಿಂಗಳಲ್ಲಿ ಹಲವೆಡೆ ಸ್ವಲ್ಪ ಪ್ರಮಾಣದಲ್ಲಿ ಮಳೆಯಾಗಿದೆ. ಇದರಿಂದ ಬರಿದಾದ ಡ್ಯಾಂಗಳಿಗೆ ಸ್ವಲ್ಪ ಪ್ರಮಾಣದಲ್ಲಿ ನೀರು ಸಂಗ್ರಹವಾಗಿದೆ. ಈ ನಡುವೆ ಮುಂಗಾರು ಮತ್ತೆ ಚುರುಕು ಪಡೆಯುವ ಯಾವ ಮುನ್ಸೂಚನೆ ಇಲ್ಲ. ಹೀಗಾಗಿ ಸದ್ಯ ಸಂಗ್ರಹವಿರುವ ನೀರನ್ನು ಮುಂದಿನ ಮಾನ್ಸೂನ್‌ವರೆಗೂ ಕುಡಿಯಲು ಬಳಸಿಕೊಳ್ಳಬೇಕೆಂದು ತಿಳಿಸಿದ್ದಾರೆ.

ಕರ್ನಾಟಕದಲ್ಲಿ ರೈತರು ಕೃಷಿಗೆ ನೀರು ಕೇಳುತ್ತಿದ್ದಾರೆ. ಆದರೆ, ನಾವು ಬಿಡುತ್ತಿಲ್ಲ. ರಾಜ್ಯದಲ್ಲಿ ಸಂಪೂರ್ಣ ಬರ ಆವರಿಸಿದೆ. ಹೀಗಾಗಿ ತಮಿಳುನಾಡಿಗೆ ನೀರು ಬಿಡಲು ಸಾಧ್ಯವೇ ಇಲ್ಲ. ತಮಿಳುನಾಡಲ್ಲಿ ಮಳೆ ಬೀಳಲಿದೆ, ಆದರೂ ಕೃಷಿಗೆ ನೀರು ಕೇಳುತ್ತಿದ್ದಾರೆ. ನಮಗೆ ಇಲ್ಲಿ ಕುಡಿಯಲು ನೀರಿಲ್ಲವೆಂದು ಕರ್ನಾಟಕ ತಿಳಿಸಿದೆ.

ತಮ್ಮ ಪಾಲಿನ ನೀರಿಗಾಗಿ ತಮಿಳುನಾಡು ವಾದ ಮಂಡಿಸಿದ್ದರೂ ನೀರು ಬಿಡುವಂತೆ ಕರ್ನಾಟಕ್ಕೆ ಕಾವೇರಿ ನೀರು ನಿಯಂತ್ರಣ ಸಮಿತಿ ಸಭೆಯಲ್ಲಿ ಸ್ಪಷ್ಟ ಸೂಚನೆ ನೀಡಿಲ್ಲ ಎನ್ನಲಾಗಿದೆ. ಸಭೆ ಮುಕ್ತಾಯದ ಬೆನ್ನಲ್ಲೇ ಸಚಿವ ರಾಮಲಿಂಗಾರೆಡ್ಡಿ ಅವರು ಅಧಿಕಾರಿಗಳ ಜೊತೆ ಸಭೆ ನಡಿಸಿ, ಮಾಹಿತಿ ಪಡೆದುಕೊಂಡರು.

ಬಳಿಕ ಮಾತನಾಡಿದ ಅವರು, ಸಭೆಯಲ್ಲಿ ಕುಡಿಯಲು ನೀರು ಮೀಸಲಿದೆ ಎಂದು ಸಮಿತಿ ಆದೇಶ ಮಾಡಿದೆ. ತಮಿಳುನಾಡಿನವರು ನೀರು ಬಿಡಲು ಬೇಡಿಕೆ ಇಟ್ಟಿದ್ದಾರೆ. ನಮ್ಮ ರಾಜ್ಯದ ಅಡ್ವೊಕೇಟ್‌ಗಳು ಸಭೆಯಲ್ಲಿ ರಾಜ್ಯದ ಸ್ಥಿತಿಗತಿ ಬಗ್ಗೆ ಮಾಹಿತಿ ಕೊಟ್ಟಿದ್ದಾರೆ. ತಕ್ಷಣ ತಮಿಳುನಾಡಿಗೆ ನೀರು ಬಿಡುವುದಿಲ್ಲ, ನೀರು ಬಿಡಬೇಕೆಂದು ಆದೇಶ ಮಾಡಿಲ್ಲ. ಈಗಾಗಲೇ ತಮಿಳುನಾಡಿಗೆ 3 ಟಿಎಂಸಿ ನೀರು ಬಿಡಲಾಗಿದೆ, ಹೆಚ್ಚು ನೀರು ಬಿಡಲು ನಮ್ಮ ಬಳಿ ನೀರಿಲ್ಲವೆಂದು ಹೇಳಿದರು.

■ ಸಿಡಬ್ಲ್ಯೂಆರ್‌ಸಿ ಸಭೆಯಲ್ಲಿ ಕರ್ನಾಟಕ ವಾದ

■ ಕುಡಿಯಲು ನೀರು ಮೀಸಲಿಡಲು ಸಮಿತಿ ಆದೇಶ

ಜೋಳದ ಹೊಲ ಪರಿಶೀಲಿಸಿದ ಶಾಸಕ

• ಪ್ರಜೋದಯ ವರದಿ

ಹಾಸನ: ಜೋಳ ಬೆಳೆಯಲ್ಲಿ ಬಿಳಿಸುಳಿ ರೋಗ ಕಾಣಿಸಿಕೊಂಡ ಹಿನ್ನಲೆ ಶಾಸಕ ಸ್ವರೂಪ್ ಅವರು ಬುಧವಾರ ಕೃಷಿ ಇಲಾಖೆ ಅಧಿಕಾರಿಗಳೊಂದಿಗೆ ಜಮೀನುಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ತಾಲ್ಲೂಕಿನ ತೇಜೂರು ಗ್ರಾಮದಲ್ಲಿ ಬಿಳಿಸುಳಿ ರೋಗ ಬಂದಿರುವ ಜೋಳ ವೀಕ್ಷಿಸಿ ಮಾತನಾಡಿದ ಅವರು, ಬಿಳಿಸುಳಿ ರೋಗ ಆವರಿಸಿ ಜೋಳದ ಬೆಳೆಯು ಸಂಪೂರ್ಣವಾಗಿ ಹಾಳಾಗುತ್ತಿದೆ. ಸಾಲಗಾಮೆ ಹೋಬಳಿ ಭಾಗದಲ್ಲಿ 4,150 ಹೆಕ್ಟೇರ್, ಕಸಬಾ ಹೋಬಳಿ ವ್ಯಾಪ್ತಿಯಲ್ಲಿ 4,600 ಹೆಕ್ಟೇರ್ ಪ್ರದೇಶದಲ್ಲಿ ಬೆಳೆದಿದ್ದ ಜೋಳದ ಬೆಳೆ ರೋಗಕ್ಕೆ ತುತ್ತಾಗಿದೆ. ರೋಗವು ಬೆಳೆಯ ಆರಂಭಿಕ ಹಂತದಲ್ಲೇ ಕಾಣಿಸಿಕೊಂಡಿದ್ದು, ಬೆಳವಣಿಗೆ ಕುಂಠಿತಗೊಂಡಿದ್ದು, ಇಳುವರಿಯಲ್ಲಿ ಗಣನೀಯ ಪ್ರಮಾಣದಲ್ಲಿ ಇಳಿಕೆ ಕಾಣಲಿದೆ. ಬಿತ್ತನೆ ಬೀಜ, ರಸಗೊಬ್ಬರ, ಔಷಧಿ, ಕೂಲಿಯಿಂದ ನಷ್ಟದ ಪ್ರಮಾಣ ದುಪ್ಪಟ್ಟಾಗಿದೆ. ತಾಲ್ಲೂಕಿನಲ್ಲಿ ಆಲೂಗೆಡ್ಡೆ, ಜೋಳ, ತರಕಾರಿ ಬೆಳೆಗಳನ್ನು ಬೆಳೆಯುವ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದು, ಈ ವರ್ಷ ಮಳೆ ಇಲ್ಲದೆ ಬೆಳೆ ಹಾಳಾಗಿದೆ. ಸರ್ಕಾರ ಗಂಭೀರವಾಗಿ ಪರಿಗಣಿಸಿ ಪರಿಹಾರ ನೀಡುವ ನಿಟ್ಟಿನಲ್ಲಿ ಮುಂದಾಗಬೇಕೆಂದು ಸ್ವರೂಪ್ ಆಗ್ರಹಿಸಿದರು.

ಜಿಲ್ಲೆಯ ಬೆಳೆಗಾರರಿಗೆ ವರವಾದ ಶುಂಠಿ ಬೇಸಾಯ

-ಮಲ್ಲಿಕಾರ್ಜುನ ಕೊಚ್ಚರಗಿ

• ಪ್ರಜೋದಯ ವರದಿ

ಹಾಸನ: ಇಳುವರಿ ಕುಸಿತ ಮತ್ತಿತರ ಕಾರಣಗಳಿಂದ ಈ ಬಾರಿ ಶುಂಠಿ ಬೆಲೆ ಗಗನಕ್ಕೇರಿದ್ದು, ಬೆಳೆಗಾರರಿಗೆ ಶುಕ್ರದೆಸೆ ಆರಂಭವಾಗಿದೆ.

ಕಳೆದ ಬಾರಿ ಬೆಳೆಗೆ ಬೆಂಕಿ ರೋಗ ಕಾಣಿಸಿಕೊಂಡ ಹಿನ್ನಲೆಯಲ್ಲಿ ಬಿತ್ತನೆಯಿಂದ ವಿಮುಖರಾಗಿದ್ದ ಬೆಳೆಗಾರರು ಮುಸುಕಿನ ಜೋಳ ಸೇರಿ ಪರ್ಯಾಯ ಬೆಳೆಯತ್ತ ಗಮನ ಹರಿಸಿದ್ದರು. ಹಾಸನ ಸೇರಿ ಸುತ್ತಲಿನ ಜಿಲ್ಲೆಗಳಲ್ಲಿ ಬಿತ್ತನೆ ಪ್ರದೇಶ ಕಡಿಮೆಯಾಗಿ ಬೆಲೆಯಲ್ಲಿ ದಿಢೀರ್ ಏರಿಕೆಯಾಗಿದೆ.

ಉತ್ತರ ಭಾರತ ಸೇರಿ ವಿದೇಶಗಳಲ್ಲೂ ಇಲ್ಲಿನ ಶುಂಠಿಗೆ ಭಾರೀ ಬೇಡಿಕೆ ಇದೆ. ಪ್ರಸ್ತುತ ಹಳೆಯ ಶುಂಠಿ 60 ಕೆ.ಜಿ.ಗೆ 12 ಸಾವಿರ ರೂ.ಗೆ ಮಾರಾಟವಾಗುತ್ತಿದ್ದರೆ, ಹೊಸ ಶುಂಠಿ 6 ರಿಂದ 8 ಸಾವಿರ ರೂ.ಗೆ ಮಾರಾಟವಾಗುತ್ತಿದೆ. ಅಮೇರಿಕಾ-ಇರಾನ್ ಸಂಘರ್ಷ, ಬಾಂಗ್ಲಾದೇಶದಲ್ಲಿ ಸಹಜ ಪರಿಸ್ಥಿತಿ ಇದ್ದಿದ್ದರೆ ಶುಂಠಿ ಬೆಲೆ 15 ಸಾವಿರ ರೂ. ದಾಟಿರುತ್ತಿತ್ತು. ಇಳುವರಿ ಇಲ್ಲದ ಹಿನ್ನಲೆಯಲ್ಲಿ ಮುಂದಿನ ದಿನಗಳಲ್ಲಿ ಬೆಲೆಯಲ್ಲಿ ಮತ್ತಷ್ಟು ಏರಿಕೆಯಾಗುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ.

ಶುಂಠಿ ದಕ್ಷಿಣ ಭಾರತದ ಬೆಳೆ

ಔಷಧಿ ಗುಣವುಳ್ಳ ಶುಂಠಿಯನ್ನು ಹಾಸನ, ಶಿವಮೊಗ್ಗಾ, ಮಡಿಕೇರಿ, ಮೈಸೂರು, ಚಿಕ್ಕಮಗಳೂರು ಭಾಗದಲ್ಲಿ ಹೆಚ್ಚು ಬೆಳೆಯಲಾಗುತ್ತಿದೆ. ಉತ್ತರ ಭಾರತದಲ್ಲಿ ಶುಂಠಿ ಬೆಳೆಯದ ಕಾರಣ ಅಲ್ಲಿನ ರಾಜ್ಯಗಳು ಕರ್ನಾಟಕವನ್ನೇ ಅವಲಂಬಿಸಿವೆ. ದೇಶದ ಕೊಲ್ಕತ್ತಾ, ದೆಹಲಿ, ಬಾಂಗ್ಲಾ ಸೇರಿ ದೇಶ, ವಿದೇಶದಲ್ಲಿ ರಾಜ್ಯದ ಶುಂಠಿಗೆ ಅಪಾರ ಬೇಡಿಕೆ ಇದೆ.

ಭೂಮಿಯ ಫಲವತ್ತತೆ ಹಾಳಾಗುತ್ತದೆಂಬ ಕಾರಣಕ್ಕೆ ಕೆಲ ವರ್ಷದ ಹಿಂದೆ ಕೇರಳ ಸರ್ಕಾರ ಶುಂಠಿ ಬೆಳೆಯನ್ನು ಸಂಪೂರ್ಣವಾಗಿ ನಿಷೇಧಿಸಿತ್ತು. ಈ ಪರಿಣಾಮ ಕೇರಳದ ಶುಂಠಿ ಬೆಳೆಗಾರರು ರಾಜ್ಯದ ಕಡೆ ಮುಖ ಮಾಡಿ ರೈತರ ಜಮೀನನ್ನು ಗುತ್ತಿಗೆ ಪಡೆದು ಶುಂಠಿ ಬೆಳೆಯಲು ಪ್ರಾರಂಭಿಸಿದರು. ಜಿಲ್ಲೆಯ ವಾಣಿಜ್ಯ ಬೆಳೆ ಆಲೂಗೆಡ್ಡೆಗೆ ಅಂಗಮಾರಿ ರೋಗ ತಗುಲಿ ನಷ್ಟ ಮಾಡಿಕೊಂಡ ಪರಿಣಾಮ ಇನ್ನು ಮುಂದೆ ಆಲೂಗೆಡ್ಡೆ ಬೆಳೆಯಲು ಸಾಧ್ಯವೇ ಇಲ್ಲವೆಂಬ ಕಾರಣದಿಂದ ಪರ್ಯಾಯ ಬೆಳೆ ಶುಂಠಿಯತ್ತ ಮುಖ ಮಾಡಿದ್ದರು. ಆದರೆ, ಕಳೆದ ಬಾರಿ ಬೆಂಕಿ ರೋಗದಿಂದ ಕೈಸುಟ್ಟುಕೊಂಡು ಕೆಲವರು ಮುಸುಕಿನ ಜೋಳ, ಆಲೂಗೆಡ್ಡೆಗೆ ಗಮನ ಹರಿಸಿದ್ದಾರೆ.

ಎಕರೆಗೆ ಎರಡು ಲ.ರೂ. ಖರ್ಚು ಮಾಡಿದರೆ ಕನಿಷ್ಟ 5 ಲ.ರೂ. ಲಾಭ ಮಾಡಿಕೊಳ್ಳಬಹುದೆಂಬ ಲೆಕ್ಕಾಚಾರದಲ್ಲಿ ಶುಂಠಿ ಬೆಳೆಯಲಾಗುತ್ತಿದೆ. ಕೇರಳ ಬೆಳೆಗಾರರಂತೆಯೇ ರಾಜ್ಯದ ರೈತರು ಶುಂಠಿ ಬೆಳೆಯುವುದನ್ನು ಅರಿತಿದ್ದಾರೆ. ಎಂಟರಿಂದ ಒಂಬತ್ತು ತಿಂಗಳ ಬೆಳೆಯಾದ್ದರಿಂದ ಶುಂಠಿ ಕೈಹಿಡಿಯುತ್ತದೆ ಎಂಬುದು ರೈತರ ನಂಬಿಕೆ. ಆದ್ದರಿಂದ ಶುಂಠಿ ಬೆಳೆಯತ್ತ ಒಲವು ತೋರುತ್ತಾರೆ.

- ಹಳೆಯ ಶುಂಠಿಗೆ ಹೆಚ್ಚಿದ ಬೇಡಿಕೆ
- 60 ಕೆ.ಜಿ.ಚೀಲಕ್ಕೆ 12 ಸಾವಿರ ರೂ.
- ಹೊಸ ಶುಂಠಿ ಚೀಲಕ್ಕೆ 6 ರಿಂದ 8 ಸಾವಿರ ರೂ.
- 7 ಸಾವಿರ ಹೆಕ್ಟೇರ್‌ನಲ್ಲಿ ಬಿತ್ತನೆ

> ಏಳೆಂಟು ತಿಂಗಳ ಹಿಂದೆಯೇ ಶುಂಠಿ ಬೆಲೆ ಪ್ರತಿ 60 ಕೆ.ಜಿ.ಗೆ 3,500 ರೂ. ಇತ್ತು. ಇಳುವರಿ ಕಡಿಮೆಯಾದ ಹಿನ್ನಲೆಯಲ್ಲಿ ಬೆಲೆಯಲ್ಲಿ ಮತ್ತಷ್ಟು ಏರಿಕೆಯಾಗಿದೆ. ಅಮೇರಿಕಾ-ಇರಾನ್ ಯುದ್ಧ ಇಲ್ಲದಿದ್ದರೆ ಇಷ್ಟೊತ್ತಿಗೆ 15 ಸಾವಿರ ರೂ. ತಲುಪುವ ಸಾಧ್ಯತೆ ಇತ್ತು. ಜಿಲ್ಲೆಯ 7 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಶುಂಠಿ ಬೆಳೆ ಕೈಗೊಳ್ಳಲಾಗಿದೆ. ಈ ಬಾರಿ ಬೇಡಿಕೆ ಹೆಚ್ಚಿದೆ.
>
> -ಯೋಗೇಶ್, ಉಪ ನಿರ್ದೇಶಕ ತೋಟಗಾರಿಕೆ ಇಲಾಖೆ, ಹಾಸನ.

ಫಲವತ್ತತೆ ಹಾಳು

ಶುಂಠಿ ಬೆಳೆಗೆ ಹೆಚ್ಚೆ, ಹೆಚ್ಚೆಗೂ ಕ್ರಿಮಿನಾಶಕವನ್ನು ಸಿಂಪಡಿಸಬೇಕು. ಭೂಮಿಯ ಫಲವತ್ತತೆ ಕಳೆದು ಕೊಳ್ಳುತ್ತದೆ ಎಂಬುದು ತಜ್ಞರ ಅಭಿಪ್ರಾಯ. ಆ ಹಿನ್ನಲೆಯಲ್ಲಿ ವಿಮುಖರಾಗುತಿದ್ದು, ಉತ್ತಮ ಬೆಲೆ ಸಿಕ್ಕಾಗ ರೈತರಿಗೆ ಶುಂಠಿ ಅನಿವಾರ್ಯವಾಗಿರುತ್ತದೆ.

ಎತ್ತಿನಹೊಳೆ ನೀರು ಸೋರಿಕೆಗೆ ಸರ್ಕಾರವೇ ಹೊಣೆ:ಹೆಚ್.ಕೆ.ಕೆ.

• ಪ್ರಜೋದಯ ವರದಿ

ಸಕಲೇಶಪುರ: ಎತ್ತಿನಹೊಳೆ ಯೋಜನೆಯ ಪೈಪ್‌ಲೈನ್ ಸ್ಫೋಟಗೊಂಡು ಅಪಾರ ಪ್ರಮಾಣದ ನೀರು ಸೋರಿಕೆಯಾಗಲು ಸರ್ಕಾರದ ಅವಸರದ ನಿರ್ಧಾರ ಹಾಗು ಕಳಪೆ ಕಾಮಗಾರಿ ಕಾರಣವೆಂದು ಮಾಜಿ ಸಚಿವ ಹೆಚ್.ಕೆ.ಕುಮಾರಸ್ವಾಮಿ ಅವರು ಆರೋಪಿಸಿದರು.

ತಾಲ್ಲೂಕಿನ ಹಲಸುಲಿಗೆ ಗ್ರಾಮದಲ್ಲಿ ಶನಿವಾರ ತಡರಾತ್ರಿ ಎತ್ತಿನಹೊಳೆ ಯೋಜನೆಯ ಪೈಪ್‌ಲೈನ್ ಸ್ಫೋಟಗೊಂಡ ಸ್ಥಳಕ್ಕೆ ಬುಧವಾರ ಭೇಟಿ ನೀಡಿ ಪರಿಶೀಲಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯೋಜನೆ ಪೂರ್ಣಗೊಳ್ಳುವ ಮುನ್ನವೇ ರಾಜಕೀಯ ಕಾರಣಕ್ಕಾಗಿ ಅವಸರದಲ್ಲಿ ಉದ್ಘಾಟನೆ ನಡೆಸಿದ್ದೇ ಇಂತಹ ಅವಘಡಗಳಿಗೆ ಕಾರಣವಾಗಿದೆ ಎಂದು ಟೀಕಿಸಿದರು.

ಈ ಯೋಜನೆಯಲ್ಲಿ ಇದು ನಾಲ್ಕನೇ ಬಾರಿ ಪೈಪ್‌ಲೈನ್ ಒಡೆದಿರುವುದು ಇಲಾಖೆಯ ನಿರ್ಲಕ್ಷ್ಯ ಮತ್ತು ಕಳಪೆ ಕಾಮಗಾರಿಗೆ ಸಾಕ್ಷಿಯಾಗಿದೆ. ಇತ್ತೀಚಿನ ಘಟನೆಯಿಂದ ರೈತರ ಬೆಳೆಗಳಿಗೆ ಹಾನಿಯಾಗಿದ್ದು, ಯೋಜನೆಯ ಗುಣಮಟ್ಟದ ಬಗ್ಗೆ ಗಂಭೀರ ಅನುಮಾನಗಳು ಮೂಡಿವೆ ಎಂದರು.

ಯೋಜನೆಯ ಪ್ರಮುಖ ಕಾಮಗಾರಿಗಳಾದ ಕೋಲಾರ ಹಾಗು ಬೈರುಗೊಂಡ್ಲು ಭಾಗಗಳ ಕಾಮಗಾರಿ ಇನ್ನೂ ಪೂರ್ಣ

ನಾವ್ಯಾರೂ ಮನುಷ್ಯರಲ್ಲ.. ಕೇವಲ ಕಂಟೆಂಟ್‌ಗಳು!

> ಅಂದಿಗೆ ಕಾಲ್ಪನಿಕ ಹಾಸ್ಯವಾಗಿದ್ದ ಇದು, ಇಂದು ವಾಸ್ತವದ ಭಾಗವಾಗಿದೆ ಮತ್ತು ಮನುಷ್ಯನಿಗೆ ಅದು ಕಾಮನ್ ಅನಿಸಿಹೋಗಿದೆ. ಇತ್ತೀಚೆಗೆ ಪೊಲೀಸ್ ಸ್ಟೇಷನ್ನೊಂದಕ್ಕೆ ಹೋಗಿದ್ದೆ. ಸೈಬರ್ ಕ್ರೈಮ್ ವಿಭಾಗ. ಅಸಹಾಯಕ ವೃದ್ಧರಿಂದ ಸಾಫ್ಟ್‌ವೇರ್ ಟೆಕ್ಕೀಗಳ ತನಕ ಹತ್ತಾರು ಜನ ಪೊಲೀಸರ ಎದುರು ತಲೆ ಮೇಲೆ ಕೈ ಹೊತ್ತು ನಿಂತಿದ್ದರು. ಸೈಬರ್ ವಂಚನೆಯಿಂದ ಹಣ ಕಳೆದುಕೊಂಡವರು. ಐವತ್ತು ಸಾವಿರದಿಂದ ಐದು ಕೋಟಿ ತನಕ ಕಳೆದುಕೊಂಡವರು ಅಲ್ಲಿದ್ದರು.

ಪದಸಾಗರ

ಮನುಷ್ಯನ ಸಂವೇದನೆಗಳು ದಿನದಿಂದ ದಿನಕ್ಕೆ ಜಡ್ಡು ಗಟ್ಟಿ ಹೋಗ್ತಾ ಇವೆಯಾ? ಸಾವಿಗೆ, ನೋವಿಗೆ ಅವಮಾನಕ್ಕೆ, ಅತ್ಯಾಚಾರಕ್ಕೆ, ಮೋಸಕ್ಕೆ, ಕೊಲೆಗೆ ಎಲ್ಲದಕ್ಕೂ ಒಂದು ನಿರ್ಲಿಪ್ತ ಪ್ರತಿಕ್ರಿಯೆ ಕೊಡುವಷ್ಟು ನಮ್ಮ ಮನಸುಗಳು ಕರಗುತ್ತಿದೆಯಾ? ಈ ಎಲ್ಲವೂ ಅತಿ ಅನಿಸುವಷ್ಟು ನಮ್ಮ ಕಣ್ಣುಕಿವಿಗಳಿಗೆ ತಲುಪುತ್ತಿರುವುದರಿಂದ ಇವೆಲ್ಲವೂ ಸಾಮಾನ್ಯ ಎಂಬ ಮನಸ್ಥಿತಿ ನಮ್ಮಲ್ಲಿ ಹುಟ್ಟಿಕೊಂಡಿದೆಯಾ? ಹುಟ್ಟಿದ ಮನುಷ್ಯ ಸಾಯಬೇಕು ಅನ್ನುವಷ್ಟು ನಾರ್ಮಲ್ ಆಗಿ ಹುಟ್ಟಿದ ಮನುಷ್ಯ ಕೊಲೆಯಾಗಲೇಬೇಕು, ಹೆಣ್ಣು ಅಂದಮೇಲೆ ಅತ್ಯಾಚಾರ ನಡೆಯೋದು ಸಹಜ, ಹಣ ಇರೋಮ್ನು ಅಂದ ಮೇಲೆ ಅವನನ್ನು ದೋಚುವುದು ಸಹಜ, ರಾಜಕಾರಣಿ ಅಂದ ಮೇಲೆ ಅವನು ಭ್ರಷ್ಟನಾಗಿರುವುದು ಪ್ರಕೃತಿ ನಿಯಮ..

ಸೋಷಿಯಲ್ ಮೀಡಿಯಾ ಅಂದಮೇಲೆ ಅಲ್ಲಿ ವೈಯಕ್ತಿಕ ದಾಳಿ, ಕೆಟ್ಟ ಬಯ್ಗುಳ ಕಾಮನ್.. ಹೀಗೆ ನಾವು ಎಲ್ಲವನ್ನೂ ಕಾಮನ್ ಬಿಡು ಎಂಬ ಸ್ಥಿತಿ ತಲುಪುತ್ತಿದ್ದೇವಾ? ವ್ಯವಸ್ಥೆಯೂ ನಮ್ಮನ್ನು ಹಾಗೆ ಅಸಹಾಯ ಕತೆಗೆ ತಳ್ಳಿ ಗಟ್ಟಿಗೊಳಿಸುತ್ತಿದೆಯಾ?

ಇಂಥ ಹಲವು ಪ್ರಶ್ನೆಗಳು ನನ್ನಲ್ಲಿ ಪದೇಪದೆ ಹುಟ್ಟಿ ಸಾಯುತ್ತವೆ. ನಾವು ಯಾವ ಸಾವಿಗೂ ಈಗ ತಿಂಗಳು ಗಟ್ಟಲೆ ಬಿಡಿ ದಿನಗಟ್ಟಲೆ ಕೂಡ ಮರುಗುತ್ತಿಲ್ಲ, ಕೊರಗುತ್ತಿಲ್ಲ, ಫೇಸ್ ಬುಕ್ಕನ್ನೇ ಉದಾಹರಣೆಯಾಗಿ ತೆಗೆದುಕೊಂಡರೆ, ಯಾರದ್ದೋ ಸಾವಿಗೆ ಸೆಕೆಂಡುಗಳಷ್ಟು ಮರುಗಿ, ಕಮೆಂಟ್ ಹಾಕಿ ಹೆಬ್ಬೆರಳಿಂದ ಸ್ಕ್ರೀನ್ ಎಳೆದ ಮರುಕ್ಷಣ ಯಾವುದೋ ಜೋಕಿಗೆ ನಗುವಷ್ಟು ಕ್ಷಣಿಕವಾಗಿ ಹೋಗಿವೆ ನಮ್ಮ ಭಾವನೆಗಳು. ಒಂದು ಭಾವನೆಯಲ್ಲಿ ಒಂದಷ್ಟು ಹೊತ್ತು ಮುಳುಗಲಾಗದ ಚಂಚಲತೆಯನ್ನು ಜಗತ್ತು ನಮ್ಮ ಮೇಲೆ ಹೇರಿಟ್ಟು ಬಿಟ್ಟಿದೆ. ಅದರಿಂದ ಬಿಡಿಸಿಕೊಳ್ಳಲೂ ಆಗದ ಅನಿವಾರ್ಯತೆ.

ಪ್ರತಿಯೊಂದು ವಿಷಯವೂ ಇನ್ನೊಬ್ಬರ ಪಾಲಿಗೆ ಕಂಟೆಂಟ್. ಎಷ್ಟೋ ಸಲ ಖುದ್ದು ಆ ಘಟನೆಯ ಪಾತ್ರಧಾರಿಗಳಿಗೂ ಅದೊಂದು ಕಂಟೆಂಟ್. ಪ್ರಪಂಚದ ತುಂಬ ಒಂದು ಅಸೂಕ್ಷ್ಮತೆ ತಾಂಡವವಾಡುತ್ತಿದೆ ಎಂಬ ಭಾವ. ದಿನವೂ ಸಾಯುವ ಜಗತ್ತಿಗೋಸ್ಕರ ಯಾಕಳಬೇಕು ಎಂಬ ಒರಟುತನ.

ದಶಕಗಳ ಹಿಂದೆ ಒಂದು ಸಿನಿಮಾ ಬಂದಿತ್ತು. ಗಣೇಶನ ಗಲಾಟೆ ಅಂತ. ಅದರಲ್ಲಿ ಕಾಂಟ್ರ್ಯಾಕ್ಟ್ ಕಿಲ್ಲರ್ ಮನೆಗೆ ಬರುವ ಒಬ್ಬ ಪಾತ್ರಧಾರಿ, ಮನೆ ಎದುರಿರುವ ಸೆಕ್ಯೂರಿಟಿಯನ್ನು ಕೇಳ್ತಾನೆ- ಏನಪ್ಪಾ ಕೊಲೆಗಾರರು ಇದಾರಾ? ಅದಕ್ಕೆ ಬಹಳ ತಣ್ಣಗೆ, ಕ್ಯಾಶುಯಗಿ ಸೆಕ್ಯೂರಿಟಿ ಉತ್ತರಿಸುತ್ತಾನೆ- ಇಲ್ಲೇ ಕೊಲೆ ಮಾಡೋಕ್ ಹೋಗಿದಾರೆ. ಬರ್ತಾರೆ ಕೂತ್ಕೊಳಿ!

ಅಂದಿಗೆ ಕಾಲ್ಪನಿಕ ಹಾಸ್ಯವಾಗಿದ್ದ ಇದು, ಇಂದು ವಾಸ್ತವದ ಭಾಗವಾಗಿದೆ ಮತ್ತು ಮನುಷ್ಯನಿಗೆ ಅದು ಕಾಮನ್ ಅನಿಸಿಹೋಗಿದೆ. ಇತ್ತೀಚೆಗೆ ಪೊಲೀಸ್ ಸ್ಟೇಷನ್ನೊಂದಕ್ಕೆ ಹೋಗಿದ್ದೆ. ಸೈಬರ್ ಕ್ರೈಮ್ ವಿಭಾಗ. ಅಸಹಾಯಕ ವೃದ್ಧರಿಂದ ಸಾಫ್ಟ್‌ವೇರ್ ಟೆಕ್ಕೀಗಳ ತನಕ ಹತ್ತಾರು ಜನ ಪೊಲೀಸರ ಎದುರು ತಲೆ ಮೇಲೆ ಕೈ ಹೊತ್ತು ನಿಂತಿದ್ದರು. ಸೈಬರ್ ವಂಚನೆಯಿಂದ ಹಣ ಕಳೆದುಕೊಂಡವರು. ಐವತ್ತು ಸಾವಿರದಿಂದ ಐದು ಕೋಟಿ ತನಕ ಕಳೆದುಕೊಂಡವರು ಅಲ್ಲಿದ್ದರು. ಪೊಲೀಸರಿಗೆ ಫೈನಾನ್ಶಿಯಲ್ ಕ್ರೈಮ್ ಪ್ರಕರಣಗಳು ಎಷ್ಟು ಕಾಮನ್ ಆಗಿ ಹೋಗಿವೆ ಅಂದರೆ, ಯಾವೊಂದು ಕೇಸ್ ಕುರಿತೂ ಅವರಲ್ಲಿ ಒಂದು ಶಾಕ್, ಅಚ್ಚರಿ, ಬೇಸರ ಇಲ್ಲವೇ ಇಲ್ಲ.

ಒಂದು ಗೇಲಿಯ ಧಾಟಿಯಲ್ಲಿ.. ಎಷ್ಟು ಹೋಯ್ತು? ಎಷ್ಟು ನಾಮ ಬಿತ್ತು? ಮರ್ತ್ ಬಿಡಿ.. ಬುದ್ಧಿ ಇಲ್ವಾ? ನಿಮ್ಮಂಥವರು ಇರೋ ತನಕ ಮೋಸ ನಡೀತಾನೇ ಇರತ್ತೆ ಬಿಡಿ, ಇದು ಹೋಯ್ತು ಅಂದ್ಕೊಳಿ.. ಇನ್ಮುಂದೆ ಹುಷಾರಾಗಿರಿ ಅಷ್ಟೆ. ಯಾವ್ದಕ್ಕೂ 1930ಗೆ ಒಂದು ಕಂಪ್ಲೇಂಟ್ ಹಾಕಿ ಹೋಗಿ ಅಂತ ತಣ್ಣಗೆ ಹೇಳಿ ಸಾಗಹಾಕ್ತಾ ಇದ್ದರು. ಪೊಲೀಸರು ಒಂದು ಹಂತಕ್ಕೆ ನಿಷ್ಠುರವಾಗಿ, ನಿರ್ಲಿಪ್ತವಾಗಿ ಇರುವುದು ಅಗತ್ಯ. ನಿತ್ಯವೂ ಇಂಥ ಸಾವಿರ ಪ್ರಕರಣ ನೋಡಿದಾಗ, ಸ್ಮಶಾನದಲ್ಲಿ ಹೆಣ ಸುಡುವವನಿಗೆ ಬರುವಂಥ ಕಲ್ಲುತನ ಬರುವುದೂ ಸಹಜವೇ. ಆದರೆ ರಕ್ಷಣೆ, ನ್ಯಾಯ ಕೇಳಿ ಬರುವವರಿಗೆ ಸಿಗುವ ಸಂದೇಶವೇನು?

ಇನ್ನೊಂದು ಕೇಸ್ ಬಂದಿತ್ತು. ಫೇಸ್‌ಬುಕ್‌ನಲ್ಲಿ ಫೇಕ್ ಅಕೌಂಟ್ ಮಾಡಿಕೊಂಡು ಒಬ್ಬಾತನ ನಿರಂತರ ಚಾರಿತ್ರ್ಯವಧೆ. ಆತ ಕೊನೆಯ ಹಾದಿ ಎಂಬಂತೆ ಪೊಲೀಸರ ಎದುರು ಬಂದು ನಿಂತಿದ್ದ. ಆತನ ಫೋಟೋಗಳನ್ನು ಸಭ್ಯ ಹೆಣ್ಣುಮಕ್ಕಳ ಫೋಟೋ ಜೊತೆ ಇರುವಂತೆ ಮಾ- ಮಾಡಿ ಅದನ್ನು ಅವರ ಮುಖಗಳಿಗೆ ಅಶ್ಲೀಲ ಫೋಟೋಗಳ ದೇಹ ಹಚ್ಚಿ, ಕೆಟ್ಟಕೊಳಕ ಶಬ್ದಗಳಿಂದ ನಿಂದಿಸುವ ಪೋಸ್ಟ್‌ಗಳನ್ನು ಫೋಕ್ ಅಕೌಂಟ್ ನಿಂದ ತೇಲಿ ಬಿಡಲಾಗುತ್ತಿತ್ತು.

ಬ್ಲಾಕ್ ಮಾಡಿದರೆ ಮತ್ತೊಂದು ಫೇಕ್ ಅಕೌಂಟ್ ಓಪನ್.

ಅದರಿಂದ ಮತ್ತದೇ ಅಶ್ಲೀಲ ನಿಂದನೆಯ ಪೋಸ್ಟ್. ಪರಿಚಿತರಿಗೆ, ಕಾಮನ್ ಫ್ರೆಂಡ್‌ಗಳಿಗೆ ಎಲ್ಲರಿಗೂ ತಲುಪುವಂತೆ ಎಡೆ ವಾಲ್ ಪೋಸ್ಟರ್‌ನಂತೆ ಅಂಟಿಸುತ್ತಾ ಹೋಗುವುದು. ಸತತ ಒಂದು ವರ್ಷದಿಂದ ಇದನ್ನು ಸಹಿಸಿಕೊಂಡು, ಪೊಲೀಸರ ಸಹಾಯ ಇಲ್ಲದೆಯೇ ನಿವಾರಿಸಿಕೊಳ್ಳಲು ಪ್ರಯತ್ನಿಸಿ ಅಂತಿಮವಾಗಿ ಆತ ಪೊಲೀಸರ ಮೊರೆಹೊಕ್ಕಿದ್ದ. ಆದರೆ ಪೊಲೀಸರು ಆತನ ಕೇಸಿಗೆ ಕೊಟ್ಟ ರಿಯಾಕ್ಷನ್ ಏನು ಗೊತ್ತಾ? ಸೋಷಿಯಲ್ ಮೀಡಿಯಾದಲ್ಲಿ ಇವೆಲ್ಲ ಕಾಮನ್ ಕಣ್ರೀ.. ಇಂಥದ್ದಕ್ಕೆಲ್ಲ ಕೇಸ್ ಹಾಕ್ತಾ ಹೋದ್ರೆ ಮುಗಿಯೋದಿಲ್ಲ. ಇಗ್ನೋರ್ ಮಾಡ್ರಿ. ಬ್ಲಾಕ್ ಮಾಡ್ರಿ ಇಲ್ಲಾಂದ್ರೆ ಸೋಷಿಯಲ್ ಮೀಡಿಯಾದಿಂದ ದೂರ ಇರಿ. ಪೊಲೀಸರಿಗೆ ಇದು ಕಾಮನ್ ಇರಬಹುದು. ಆದರೆ ಒಂದು ವರ್ಷ ಅದರಿಂದ ನೊಂದಾತನಿಗೆ, ಮಾನಹಾನಿಗೆ ಒಳಪಟ್ಟವನಿಗೆ, ಮಾನಸಿಕ ಕಿರಿಕಿರಿ ಅನುಭವಿಸಿದವನಿಗೆ, ನ್ಯಾಯ ಬೇಡವೇ?

ಆತ ತಿರುಗಿ ಕೂಗಾಡಿದ್ದ. ದರ್ಶನ್- ರೇಣುಕಾಸ್ವಾಮಿ ಥರದ ಪ್ರಕರಣಗಳು ಮತ್ತೆ ಮತ್ತೆ ಆಗೋಕೆ ಪೊಲೀಸ್ ವ್ಯವಸ್ಥೆಯೇ ಕಾರಣ ಅಂತ ನಂಗೆ ಸ್ಪಷ್ಟವಾಯ್ತು. ತೇಜೋವಧೆ, ಅಶ್ಲೀಲ ಬಯ್ಗುಳ, ಸೈಬರ್ ವಂಚನೆ, ಧಮಕಿ, ಇದ್ಯಾವುದಕ್ಕೂ ನಿಮ್ಮಿಂದ ಪರಿಹಾರ ಇಲ್ಲ ಅಂದ್ರೆ ಏನು ಮಾಡಬೇಕು? ನಾವೇ ಒಂದು ಗತಿ ಕಾಣಿಸಬೇಕು. ಆದರೇನು ಮಾಡೋದು. ಅಂಥ ಎಕ್ಸ್‌ಟ್ರೀಮ್ ಸ್ಟೆಪ್ ತಗೊಳೋ ಹಾಗೆ ಮಾಡಿ, ಕೊನೆಗೆ ನಮ್ಮನ್ನೇ ಜೈಲಿಗಟ್ಟುತ್ತೆ ನಿಮ್ಮ ಕಾನೂನು. ಒಂದೋ ನಾವು ತಪ್ಪು ಮಾಡಿ ಜೈಲಿಗೆ ಹೋಗಬೇಕು ಅಥವಾ ಇವರ ತೇಜೋವಧೆ ತಾಳಲಾಗದೇ ಆತ್ಮಹತ್ಯೆ ಮಾಡ್ಕೋಬೇಕು. ಅಷ್ಟೇ ಅಲ್ವಾ ಪರಿಹಾರ?

ಎಲ್ಲವನ್ನೂ ಗಮನಿಸುತ್ತಾ ನಿಂತಿದ್ದೆ. ಅವನ ಮಾತಲ್ಲಿ ಸತ್ಯವಿದೆಯಲ್ವಾ ಅನಿಸಿತು. ಪೊಲೀಸರಿಗೂ ಅವರದೇ ಆದ ಮಿತಿ ಇದೆ. ಅಸಹಾಯಕತೆ ಇದೆ. ಆದರೆ ಸಾಂತ್ವನ ಹೇಳಿ, ಭರವಸೆ ನೀಡಿ ಕಳಿಸಲೂ ಆಗದಷ್ಟು ಕಗಿರಲ್ಲ ಎಂದು ಬೇಸರವಾಯ್ತು.

ಇತ್ತ ಅದೇ ಸಮಯದಲ್ಲಿ ಕೇತನ್ ಅಗರವಾಲ್ ಹತ್ಯೆ ಪ್ರಕರಣ ಎಡೆ ಚರ್ಚೆಯಾಗುತ್ತಿತ್ತು. ಒನ್ಸ್ ಅಗೇನ್ ಅದು ನ್ಯೂಸ್ ಚಾನೆಲ್ಲುಗಳಿಂದ ಹಿಡಿದು ಯೂಟ್ಯೂಬರ್ಸ್, ಫೇಸ್ ಬುಕ್ ಕಂಟೆಂಟ್ ಕ್ರಿಯೇಟರ್ಸ್ ತನಕ ಎಲ್ಲರಿಗೂ ಅದೊಂದು ಕಂಟೆಂಟ್. ಸುದ್ದಿ ಜಗತ್ತು ಈಗಂತೂ ದಿನವೂ ಇಂಥದ್ದೊಂದು ಸುದ್ದಿಗಾಗಿ ರಣಹದ್ದಿನಂತೆ ಕಾದು ಕೂತಿರುತ್ತದೆ. ಹಣ ಬೀಳದಿದ್ದರೆ ನಮಗೆ ಊಟವಿಲ್ಲ ಎಂಬಂತೆ. ಮೊನ್ನೆ ಗಾಯಕಿ ಎಸ್ ಜಾನಕಿ ನಿಧನದ ಸುದ್ದಿ ಹೊರ ಬರುತ್ತಿದ್ದಂತೆಯೇ ಮಾಧ್ಯಮಗಳಿಗೆ ಭರ್ಜರಿ ಊಟ ಸಿಕ್ಕ ಸಂಭ್ರಮ. ಅದರ ಮಧ್ಯ ಇನ್ನೊಬ್ಬ ಮಾಧ್ಯಮಜೀವಿ, ಗಾಯಕಿಯ ಅಂತ್ಯ ಸಂಸ್ಕಾರ ಮುಗಿದ ನಂತರ ಇನ್ನೊಂದು ಸುದ್ದಿ ಹರಿಬಿಡುತ್ತಾನೆ. ಜಾನಕಿ ಸತ್ತಿರುವುದು ಸುಳ್ಳು ಅಂತ. ನಿಜ ಏನೆಂಬುದು ಗೊತ್ತಿದ್ದರೂ ಬೇಕಂತಲೇ ಇಂಥದ್ದೊಂದು ವ್ಯತಿರಿಕ್ತ ಸುದ್ದಿ ಮಾಡಿ ವೈರಲ್ ಆಗುವ ಹಪಾಹಪಿ. ವರ್ಷಗಳ ಹಿಂದೆ ತೀರಿಕೊಂಡ ಜಯಂತಿ, ಕಾಶಿ ಮುಂತಾದ ಸೆಲೆಬ್ರಿಟಿಗಳನ್ನು ಫ್ರೆಶ್ ಆಗಿ ಮತ್ತೆ ಸಾಯಿಸಿ ಶ್ರದ್ಧಾಂಜಲಿ ಫೋಟೋ ಹಾಕುತ್ತಾರೆ. ಅದಕ್ಕೊಂದಿಷ್ಟು ಜನ ಉಗಿದು ಉಪ್ಪು ಹಾಕುತ್ತಿದ್ದರೆ, ಇನ್ನೊಂದಿಷ್ಟು ಮಂದಿ ಹಿಂದುಮುಂದು ನೋಡದೆ ರಿಪ್... ರಿಪ್... ಎಂದು ಬರೆದು ಹೋಗುತ್ತಿರುತ್ತಾರೆ.

ಕೇತನ್ ಅಗರವಾಲ್ ಹತ್ಯೆ ಜಗತ್ತಿನ ಪಾಲಿಗೆ ಒಂದು ಸಿನಿಮಾ ಆಗಬಲ್ಲ ಸರಕು. ಕ್ರೈಮ್ ಸೀರೀಸ್‌ಗೆ ಹೇಳಿ ಮಾಡಿಸಿದ ಘಟನೆ.. ಇನ್ನೂ ಎರಡು ಹೆಜ್ಜೆ ಮುಂದೆ ಹೋದರೆ, ಆತನನ್ನು ತಳ್ಳಿ ಕೊಂದ ಜಾಗ ವೈರಲ್ ಇನ್ಸ್ಟಾಗ್ರಾಮ್ ಫೋಟೋ ಸ್ಪಾಟ್! ಆ ಜಾಗದಲ್ಲಿ ಒಬ್ಬಾಕೆ ತಳ್ಳುವಂತೆ, ಮತ್ತೊಬ್ಬ ಬೀಳುವಂತೆ ಫೋಟೋ ತೆಗೆಸಿಕೊಳ್ಳುವುದು ವೈರಲ್ ಟ್ರೆಂಡ್. ಎತ್ತ ಸಾಗುತ್ತಿದೆ ಜಗತ್ತು? ನಮಗೇನಾಗುತ್ತಿದೆ?

ಪ್ರತಿ ದಿನ ಒಂದು ಸಾವು. ಎರಡು ದಿನ ಅದೇ ಬ್ರೇಕಿಂಗ್ ನ್ಯೂಸ್. ನಂತರ ಅದೇ ವಾಟ್ಸಾಪ್ ಫಾರ್ವರ್ಡ್. ಆನಂತರ ಅದು ಸಿನಿಮಾ ಕಂಟೆಂಟ್. ಆಮೇಲೆ? ಇನ್ನೊಂದು ಸಾವಿಗೆ ಕಾಯೋದು!

ಕೊಲೆ ಎಂಬುದು ಇಷ್ಟೊಂದು ಸಲೀಸು ವಿಷಯಗಳಾಗಿ ಹೋದವೇ? ಸಿಯಾ ಗೋಯಲ್ ಮತ್ತು ಚೇತನ್ ಚೌಧರಿ ಸೇರಿ ಮಾಡಿದ್ದಾರೆ ಎನ್ನಲಾಗಿರುವ ಈ ಕೊಲೆ ಆ ಕ್ಷಣದಲ್ಲಿ ಸಂಭವಿಸಿರುವುದಲ್ಲ. ದಿನಗಟ್ಟಲೆ ವಾರಗಟ್ಟಲೆ ಪ್ರೊಫೆಶನಲ್ ಕಿಲ್ಲರ್‌ಗಳ ಮಾದರಿಯಲ್ಲಿ ಪ್ಲಾನ್ ಮಾಡಿದ ಕೊಲೆಗಳಿವು. ಯಾರೋ ಒಬ್ಬರು ನಮ್ಮ ಪಕ್ಕದಲ್ಲಿ ಕುಳಿತು, ನಮ್ಮ ಜೊತೆ ಊಟ ಮಾಡುತ್ತಾ, ನಮ್ಮ ಜೊತೆ ನಗುತ್ತಾ, ನಮ್ಮ ಜೊತೆ ರೂಮ್ ಹಂಚಿಕೊಳ್ಳುತ್ತಾ, ನಮ್ಮನ್ನೇ ಕೊಲ್ಲಲು ಹೊಂಚು ಹಾಕುತ್ತಿದ್ದಾರೆ ಅಂತ ಇಮ್ಯಾಜಿನ್ ಆದರೂ ಮಾಡಿಕೊಳ್ಳಲು ಸಾಧ್ಯವಾ? ಮನುಷ್ಯನ ಬೇಸಿಕ್ ನಂಬಿಕೆಯನ್ನೇ ಹೊಡೆದುಹಾಕುವ ವಿಷಯವಲ್ಲವೇ ಇದು? ಇಂಥದ್ದೊಂದು ವಿಚಾರವನ್ನು ಕೂಡ ನಾವು ಕಂಟೆಂಟ್‌ನಂತೆ ನೋಡುವಷ್ಟು ಅಸೂಕ್ಷರಾಗಿ ಹೋಗಿದ್ದಾದ್ರೂ ಹೇಗೆ? ನಾವು ಸೆನ್ಸಿಬಲಿಟಿ ಮರೆತು ಸೆನ್ಸೇಷನಲೈಸ್ ಮಾಡುವ ಹುಕಿಗೆ ಬಿದ್ದಿದ್ದೇವೆ ಅನಿಸುತ್ತಿಲ್ಲವೇ? ಪ್ರತಿ ಹತ್ಯೆ, ಸಾವು, ಇನ್ನಿತರ ಘಟನೆಗಳಿಗೆ ನಾವು ತನಿಖಾಧಿಕಾರಿಗಳಾಗುತ್ತಿದ್ದೇವೆ. ಮನಃಶಾಸ್ತ್ರಜ್ಞರಾಗುತ್ತಿದ್ದೇವೆ. ನ್ಯಾಯಾಧೀಶರಾಗುತ್ತಿದ್ದೇವೆ. ಆ ಕ್ಷಣದ ತಜ್ಞರಾಗುತ್ತಿದ್ದೇವೆ. ಒಂದು ಕ್ರಿಕೆಟ, ಪೊಲಿಟಿ ಅಥವಾ ಸಿನಿಮಾ ಕುರಿತು ಹೇಗೆ ಚರ್ಚೆ ಮಾಡುತ್ತೇವೆಯೋ ಹಾಗೆ ಇದೂ ಒಂದು ಹೊತ್ತಿನ ಚರ್ಚೆಯ ವಿಷಯವಾಗಿಸಿ ಕೊಂಡು ಮುಂದಿನ ಹೆಣಕ್ಕೆ ಕಾಯುತ್ತಿದ್ದೇವೆ. ಮೊಬೈಲ್ ಸ್ಕ್ರೀನ್ ಸ್ಕ್ರೋಲ್ ಮಾಡಲು ಶುರುವಿಡುತ್ತೇವೆ.

ಕೊಲೆಗಾರ ತನ್ನ ಮನುಷ್ಯತ್ವವನ್ನು ಒಮ್ಮೆ ಕಳೆದುಕೊಳ್ಳುತ್ತಾನೆ. ನಾವು ಅದನ್ನು ಇನ್ಸ್ಟಾಲ್ ಮೆಂಟ್‌ಗಳಲ್ಲಿ ಕಳೆದುಕೊಳ್ಳುತ್ತೇವೆ. ಅಷ್ಟೇ ವ್ಯತ್ಯಾಸ. ಸಾವು, ಕ್ರೈಮ, ವಂಚನೆ ಇವೆಲ್ಲವನ್ನೂ ಕಂಟೆಂಟ್ ಎಂಬಂತೆ ಜಗತ್ತು ಎಂಜಾಯ್ ಮಾಡುತ್ತಿದೆ ಅಂದರೆ ಯೂನಿವರ್ಸ್ ಅದನ್ನೇ ಕೊಡುತ್ತಾ ಹೋಗುತ್ತದೆ. ಡಿಜಿಟಲ್ ಜಗತ್ತು ಮಾಡುತ್ತಿರುವುದು ಅದನ್ನೇ ಅಲ್ವೇ? ನಾವೇನು ನೋಡುತ್ತೀವೋ ಅದನ್ನೇ ಸರ್ವ್ ಮಾಡುತ್ತದೆ. ಹಾಗೆಯೇ ಅಸಲಿ ಜಗತ್ತು ಕೂಡ ನಾವು ಬಯಸುತ್ತಿರುವುದನ್ನೇ ಕೊಡುತ್ತಾ ಹೋಗುತ್ತದೆ. ಒಂದು ದಿನ ನಮ್ಮನ್ನೇ ಅದರ ಕಂಟೆಂಟ್ ಆಗಿಸಿಕೊಳ್ಳುತ್ತದೆ. ಅದು ನಮ್ಮ ಅಂತ್ಯ. ಇನ್ನೊಂದು ವರ್ಗ ಅದನ್ನು ಎಂಜಾಯ್ ಮಾಡುತ್ತಾ ತಮಗೇ ಗೊತ್ತಿಲ್ಲದಂತೆ ತಮ್ಮ ಟರ್ನ್‌ಗೆ ಕಾಯುತ್ತಿರುತ್ತದೆ. ದುರಂತ!

- ನವೀನ್ ಸಾಗರ್

ಹಠಕ್ಕೆ ಬಿದ್ದು ಕಂಬಳ ನಡೆಸುವುದರ ಉದ್ದೇಶವೇನು?

> ವಿಶ್ವಪ್ರಸಿದ್ಧ ಮೈಸೂರು ದಸರಾದಲ್ಲಿ ಕರಾವಳಿ ಭಾಗದ ಜಾನಪದ ಕ್ರೀಡೆ ಕಂಬಳದ ಆಯೋಜನೆಗೆ ತೀರ್ಮಾನ ಮಾಡಿರುವುದು ಪರ/ವಿರೋಧ ಚರ್ಚೆಗೆ ಗ್ರಾಸವಾಗಿದೆ. ಮೈಸೂರು ಸಂಸದ ಯದು ವೀರ ಒಡೆಯರ್, ಮಾಜಿ ಸಂಸದ ಪ್ರತಾಪ್ ಸಿಂಹ ಸೇರಿದಂತೆ ಕೆಲ ಸಾಂಸ್ಕೃತಿಕ ಸಂಘಟನೆಗಳು, ರೈತ ಮುಖಂಡರು ಕಂಬಳದ ಆಯೋಜನೆಗೆ ವಿರೋಧ ವ್ಯಕ್ತಪಡಿಸುತ್ತಿದ್ದರೆ, ದಕ್ಷಿಣ ಕನ್ನಡದ ಪುತ್ತೂರು ಕ್ಷೇತ್ರದ ಶಾಸಕ ಅಶೋಕ್ ರೈ ಒತ್ತಾಯದ ಮೇರೆಗೆ ಸಿಎಂ ಡಿ.ಕೆ. ಶಿವಕುಮಾರ್ ಅವರು ಕಂಬಳ ನಡೆಸುವ ನಿರ್ಧಾರ ಮಾಡಿದ್ದಾರೆ.



ಜನಪಥ ವೈಸೂರು ದಸರಾಕ್ಕೆ ಅಂದಾಜು 40-45 ಕೋಟಿ ಖರ್ಚಾಗಬಹುದು. ಅದರಲ್ಲಿ ರೂ.10 ಕೋಟಿಯನ್ನು ಕಂಬಳಕ್ಕೆಂದೇ ಮೀಸಲಿಡಬೇಕಿದೆ. ದಸರಾದಲ್ಲಿ ಬೇರೆ ಎಲ್ಲಾ ಆಕರ್ಷಣೆಗಳೂ ಇರುವಾಗ ಕಂಬಳಕ್ಕೆ ಅವಕಾಶ ನೀಡಿದರೆ ತಪ್ಪೇನು ಎಂಬುದು ಅಶೋಕ್ ರೈ ವಾದ. ಸರಕಾರ ಇತರ ಕಲೆಗಳಿಗೆ, ಕಲಾವಿದರ ಅನುಕೂಲಕ್ಕೆ ಎಷ್ಟು ಖರ್ಚು ಮಾಡುತ್ತದೆ ಎಂಬುದೂ ಪ್ರಶ್ನೆಯೇ.

ವಿಶ್ವಪ್ರಸಿದ್ಧ ಮೈಸೂರು ದಸರಾದಲ್ಲಿ ಕರಾವಳಿ ಭಾಗದ ಜಾನಪದ ಕ್ರೀಡೆ ಕಂಬಳದ ಆಯೋಜನೆಗೆ ತೀರ್ಮಾನ ಮಾಡಿರುವುದು ಪರ/ವಿರೋಧ ಚರ್ಚೆಗೆ ಗ್ರಾಸವಾಗಿದೆ. ಮೈಸೂರು ಸಂಸದ ಯದು ವೀರ ಒಡೆಯರ್, ಮಾಜಿ ಸಂಸದ ಪ್ರತಾಪ್ ಸಿಂಹ ಸೇರಿದಂತೆ ಕೆಲ ಸಾಂಸ್ಕೃತಿಕ ಸಂಘಟನೆಗಳು, ರೈತ ಮುಖಂಡರು ಕಂಬಳದ ಆಯೋಜನೆಗೆ ವಿರೋಧ ವ್ಯಕ್ತಪಡಿಸುತ್ತಿದ್ದರೆ, ದಕ್ಷಿಣ ಕನ್ನಡದ ಪುತ್ತೂರು ಕ್ಷೇತ್ರದ ಶಾಸಕ ಅಶೋಕ್ ರೈ ಒತ್ತಾಯದ ಮೇರೆಗೆ ಸಿಎಂ ಡಿ.ಕೆ. ಶಿವಕುಮಾರ್ ಅವರು ಕಂಬಳ ನಡೆಸುವ ನಿರ್ಧಾರ ಮಾಡಿದ್ದಾರೆ.

2023ರಲ್ಲಿ ಕಂಬಳವನ್ನು ಬೆಂಗಳೂರಿನಲ್ಲಿ ಆಯೋಜನೆ ಮಾಡಿದ್ದೆವು ಎಂದು ಹಿರಿ ಹಿಗ್ಗಿದ್ದ ಅಶೋಕ್ ರೈ, ಈಗ ಕಂಬಳವನ್ನು ನಾವು ಮೈಸೂರು ದಸರಾಕ್ಕೂ ವಿಸ್ತರಣೆ ಮಾಡುವಲ್ಲಿ ಯಶಸ್ವಿಯಾಗಿದ್ದೇವೆ ಎಂದು ರಾಜಕೀಯ ಲಾಭ ಪಡೆದುಕೊಳ್ಳಲು ಮುಂದಾಗುವುದರಲ್ಲಿ ಅಚ್ಚರಿ ಏನಿಲ್ಲ. ದಸರಾದೊಂದಿಗೆ ಭಾವನಾತ್ಮಕವಾಗಿ ಜೋಡಿಸಿಕೊಂಡಿರುವ ಮೈಸೂರು ಜನತೆಯ ಭಾವನೆ ಏನೇ ಇದ್ದರೂ, ಮಹತ್ವಾಕಾಂಕ್ಷಿ ರಾಜಕಾರಣಿಯಾಗಿರುವ ಅಶೋಕ್ ರೈಗೆ ಮೈಸೂರಿನಲ್ಲಿ ಕಂಬಳ ಮಾಡುವುದು ರಾಜಕೀಯ ಜೀವನದ ಮಹತ್ವದ ಮೈಲಿಗಲ್ಲಾಗಬಹುದು. ಅಶೋಕ್ ರೈ ರಾಜಕೀಯ ಏರುಗತಿ ಹಿಂದೆ ಕಂಬಳದ ಕೊಡುಗೆ ಇದೆ. ಕಂಬಳಕ್ಕೆ ನಿಷೇಧ ಹೇರಬೇಕು ಎಂಬ ಅರ್ಜಿ ಸುಪ್ರೀಂ ಕೋರ್

ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಉಚಿತ ಪ್ರವೇಶ

ಕಲಾ, ವಾಣಿಜ್ಯ, ವಿಜ್ಞಾನ ವಿಭಾಗದ ಪ್ರಯೋಜನ ಪಡೆದುಕೊಳ್ಳಲು ಶಾಸಕ ಎ.ಮಂಜು ಮನವಿ

• ಪ್ರಜೋದಯ ವರದಿ

ಅರಕಲಗೂಡು: ಪಟ್ಟಣದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ 2026-27ನೇ ಸಾಲಿನ ಬಿಎ (ಹೆಚ್ ಇಪಿ, ಹೆಚ್ಎಸ್‌ಕೆ, ಹೆಚ್ಇಕೆ, ಹೆಚ್ ಇಎಸ್, ಹೆಚ್ಇಇ) ಮತ್ತು ವಾಣಿಜ್ಯ ಹಾಗೂ ವಿಜ್ಞಾನಿ ವಿಭಾಗಕ್ಕೆ ಪ್ರವೇಶಾತಿ ನಡೆಯುತ್ತಿದ್ದು, ವಿದ್ಯಾರ್ಥಿಗಳು ತ್ವರಿತವಾಗಿ ಪ್ರವೇಶಾತಿ ಪಡೆದರೆ ಶುಲ್ಕ ವಿನಾಯಿತಿ ಹಾಗೂ ಬಡ ವಿದ್ಯಾರ್ಥಿಗಳಿಗೆ ಉಚಿತ ಪ್ರವೇಶಾತಿಗೆ ಅವಕಾಶ ಕಲ್ಪಿಸಲಾಗಿದ್ದು, ಇದರ ಪ್ರಯೋಜನವನ್ನು ತಾಲ್ಲೂಕಿನ ವಿದ್ಯಾರ್ಥಿಗಳು ಮತ್ತು ಪೋಷಕರು ಪಡೆದುಕೊಳ್ಳಬೇಕೆಂದು ಶಾಸಕ ಎ. ಮಂಜು ಮನವಿ ಮಾಡಿದರು.

ಕಾಲೇಜಿನಲ್ಲಿ ಪ್ರಗತಿಯಲ್ಲಿರುವ ಆಡಿಟೋರಿಯಂ ಕಾಮಗಾರಿ ವೀಕ್ಷಣೆ ಮಾಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಕಾರಿ ಕಾಲೇಜಿಗೆ ಹೆಚ್ಚಿನ ಪ್ರಮಾಣದಲ್ಲಿ ಗ್ರಾಮೀಣ ಭಾಗದ ರೈತರು, ಬಡ ಕುಟುಂಬದ ಮಕ್ಕಳು ಸೇರ್ಪಡೆಗೊಳ್ಳುತ್ತಿದ್ದು, ಈ ಸಲುವಾಗಿ ಪ್ರವೇಶಾತಿ ಪಡೆಯುವ ಎಲ್ಲಾ ವಿದ್ಯಾರ್ಥಿಗಳಿಗೂ

ಶುಲ್ಕ ಪಡೆಯದೆ ಉಚಿತವಾಗಿ ಪ್ರವೇಶಾತಿಗೆ ಅವಕಾಶ ಮಾಡಿಕೊಡಲಾಗಿದೆ ಎಂದು ತಿಳಿಸಿದರು.

ತಾಲ್ಲೂಕು ಕೇಂದ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಅಗತ್ಯ ಎಲ್ಲಾ ಮೂಲ ಸೌಕರ್ಯಗಳನ್ನು ಹೊಂದಿದೆ. ಪ್ರಮುಖವಾಗಿ ವಿದ್ಯಾರ್ಥಿಗಳಿಗೆ ಉಚಿತ ವಸತಿ ನಿಲಯ ವ್ಯವಸ್ಥೆ ಕೂಡ ಇದೆ. ನುರಿತ ಉಪನ್ಯಾಸಕರ ಬಳಗವನ್ನು ಹೊಂದಿದೆ. ಅಲ್ಲದೆ ವಿಷಯ ತಜ್ಞರುಗಳನ್ನು ಆಹ್ವಾನಿಸಿ ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ಕೂಡ ಶೈಕ್ಷಣಿಕ ಅವಧಿಯಲ್ಲಿ ಕಲ್ಪಿಸಿಕೊಡಲಾಗಿದೆ. ಇದರಿಂದ ವಿದ್ಯಾರ್ಥಿಗಳಿಗೆ ಉದ್ಯೋಗ ಅವಕಾಶದ ಮಾರ್ಗದರ್ಶನಕ್ಕೆ ಒತ್ತು ನೀಡಲಾಗಿದೆ ಎಂದರು.

ವಿದ್ಯಾರ್ಥಿಗಳಲ್ಲಿ ನಾಯಕತ್ವ ಗುಣಗಳನ್ನು ಉತ್ತೇಜಿಸುವ ಸಲುವಾಗಿ ಎನ್.ಎಸ್.ಎಸ್. ವಿಭಾಗ, ಸಾಂಸ್ಕೃತಿಕ ಘಟಕ, ಸ್ಕೌಟ್ಸ್ ಮತ್ತು ಗೈಡ್ಸ್, ಯುವ ರೆಡ್ ಕ್ರಾಸ್, ಆಪ್ತ ಸಮಾಲೋಚನಾ ಸಮಿತಿ ಸೇರಿದಂತೆ ಮುಂತಾದವ ವಿಶೇಷತೆಗಳನ್ನು ಕಾಲೇಜು ಹೊಂದಿದೆ. 22 ಸಾವಿರ ಪುಸ್ತಕಗಳನ್ನು ಹೊಂದಿರುವ ಬೃಹತ್ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರ ಕಾರ್ಯ ನಿರ್ವಹಿಸುತ್ತಿದೆ ಎಂದು ವಿವರಿಸಿದರು.

3.31 ಕೋಟಿ ರೂ. ವೆಚ್ಚದಲ್ಲಿ ಆಡಿಟೋರಿಯಂ ನಿರ್ಮಾಣ:

ತಾಲ್ಲೂಕಿನಲ್ಲಿಯೇ ಪ್ರಥಮ ಎನ್ನಲಾದ 3.31 ಕೋಟಿ ರೂ. ವೆಚ್ಚದಲ್ಲಿ ಬೃಹತ್ ಆಡಿಟೋರಿಯಂ ನಿರ್ಮಿಸಲಾಗುತ್ತಿದೆ. ಇದರೊಂದಿಗೆ ಒಳಾಂಗಣ ಕ್ರೀಡಾಂಗಣ ಕೂಡ ನಿರ್ಮಾಣಗೊಳ್ಳಲಿದೆ. ಇಂತಹ ಅಭೂತಪೂರ್ವ ಸೌಲಭ್ಯವಿರುವ ಕಾಲೇಜಿಗೆ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ದಾಖಲಾಗುವಂತೆ ತಿಳಿಸಿದರು.

ಈಗಾಗಲೇ ಪ್ರವೇಶಾತಿ ಆರಂಭಗೊಂಡಿದ್ದು ಆರ್ಥಿಕವಾಗಿ ಇರುವ ಬಡ ಕುಟುಂಬದ ಹಲವು ವಿದ್ಯಾರ್ಥಿಗಳು ಇಲ್ಲಿಯವರೆಗೆ ಪ್ರವೇಶಾತಿ ಪಡೆದಿರುವುದಿಲ್ಲವೋ ಅಂತಹ ವಿದ್ಯಾರ್ಥಿಗಳು ಕಾಲೇಜಿನ ಸಿಡಿಸಿ ವತಿಯಿಂದ ಪ್ರಥಮ ಬಿಎ, ಬಿಕಾಂ, ಬಿಎಸ್ಸಿ ತರಗತಿಗೆ ಉಚಿತವಾಗಿ ಪ್ರವೇಶಾತಿ ನೀಡಲಾಗುವುದು. ಪ್ರವೇಶಾತಿ ಬಯಸುವವರು ಹೆಚ್ಚಿನ ಮಾಹಿತಿಗಾಗಿ ಪ್ರಾಂಶುಪಾಲರು, ಮೊ: 9902553014 ನ್ನು ಸಂಪರ್ಕಿಸಬಹುದಾಗಿದೆ ಎಂದು ಅವರು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಸಿಡಿಸಿ ಉಪಾಧ್ಯಕ್ಷ ಬಾಲಾಜಿ, ಪ್ರಾಂಶುಪಾಲ ಮಂಜುನಾಥ್ ಸೇರಿದಂತೆ ಇನ್ನಿತರರು ಹಾಜರಿದ್ದರು.

ರಾಜ್ಯದಲ್ಲಿ 32 ಮಂದಿಗೆ ಕೊರೊನಾ ದೃಢ: ಆತಂಕ

ಬೆಂಗಳೂರು: ನೆರೆಯ ಆಂಧ್ರಪ್ರದೇಶದಲ್ಲಿ ಕೋವಿಡ್ ಪ್ರಕರಣಗಳು ಉಲ್ಬಣಗೊಳ್ಳುತ್ತಿರುವ ಬೆನ್ನಲ್ಲೇ ಈಗ ಕರ್ನಾಟಕದಲ್ಲಿಯೂ ಆತಂಕ ಮೂಡಿಸಿದೆ. ರಾಜ್ಯದಲ್ಲಿ ಈಗಾಗಲೇ 32ಕ್ಕೂ ಹೆಚ್ಚು ಜನರಿಗೆ ಕೊರೋನಾ ಪಾಸಿಟಿವ್ ಬಂದಿರುವುದು ಸಾರ್ವಜನಿಕರಲ್ಲಿ ಆತಂಕ ಹೆಚ್ಚಿಸಿದೆ.

ಕೆಲ ವರ್ಷಗಳ ಹಿಂದೆ ಜಗತ್ತನ್ನೇ ನಡುಗಿಸಿದ್ದ ವೈರಸ್ ರೂಪಾಂತರದ ಭೀತಿ ಇದೀಗ ಮತ್ತೆ ಮುಂಚೂಣಿಗೆ ಬಂದಿದೆ. ಆಂಧ್ರಪ್ರದೇಶದ ಪರಿಸ್ಥಿತಿಗೆ ಸಂಬಂಧಿಸಿದಂತೆ ಹರಿದಾಡುತ್ತಿರುವ ವದಂತಿಗಳ ನಡುವೆಯೇ, ಇತ್ತ ಕರ್ನಾಟಕದಲ್ಲೂ ಹೊಸ ಪಾಸಿಟಿವ್ ಪ್ರಕರಣಗಳು ಪತ್ತೆಯಾಗುತ್ತಿವೆ.

ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ನಿಧಾನವಾಗಿ ಏರಿಕೆಯಾಗುತ್ತಿರುವುದು ವರದಿಯಾಗಿದೆ. ಜೂನ್ ತಿಂಗಳ ಅವಧಿಯಲ್ಲಿ ಕೇವಲ 14 ಪಾಸಿಟಿವ್ ಪ್ರಕರಣಗಳು ದಾಖಲಾಗಿದ್ದವು. ಆದರೆ ಜುಲೈ ತಿಂಗಳಲ್ಲಿ ಕೇವಲ ಹತ್ತು ದಿನಗಳಲ್ಲೇ ಈ ಸಂಖ್ಯೆ ಬರೋಬ್ಬರಿ 32ಕ್ಕೆ ತಲುಪಿದೆ.

ಉತ್ತಮ ವಿದ್ಯಾಭ್ಯಾಸ ಪಡೆದು ದೇಶದ ಸತ್ಪ್ರಜೆಗಳಾಗಬೇಕು

ಶಿಕ್ಷಣದಿಂದ ಮಕ್ಕಳು ವಂಚಿತರಾಗಬಾರದು

• ಪ್ರಜೋದಯ ವರದಿ

ಹಾಸನ: ಶಿಕ್ಷಣದಿಂದ ಯಾವ ಮಕ್ಕಳೂ ವಂಚಿತರಾಗಬಾರದು, ಪ್ರತಿಯೊಂದು ಮಗುವು ಶಿಕ್ಷಣ ಪಡೆದು ದೇಶದ ಒಳ್ಳೆಯ ಪ್ರಜೆಯಾಗಬೇಕು ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಹೇಮಾವತಿ ಅವರು ತಿಳಿಸಿದ್ದಾರೆ.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ವಕೀಲರ ಸಂಘ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಮಕ್ಕಳ ಕಲ್ಯಾಣ ಸಮಿತಿ ಇವರುಗಳ ಸಂಯುಕ್ತಾ ಶ್ರಯದಲ್ಲಿ ಬುಧವಾರ ಬಾಲ ಮಂದಿರದಲ್ಲಿ ಕಾನೂನು ಸಲಹಾ ಕೇಂದ್ರ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯೆಯಿಂದ ಮಾತ್ರ ಗೌರವವನ್ನು ಪಡೆದುಕೊಳ್ಳಲು ಸಾಧ್ಯ. ಈ ನಿಟ್ಟಿನಲ್ಲಿ ಪ್ರತಿಯೊಂದು ಮಗು ಒಳ್ಳೆಯ ವಿದ್ಯೆಯನ್ನು ಪಡೆದು ಉತ್ತಮ ಕೆಲಸ ಮಾಡುವ ಮೂಲಕ ಸಮಾಜದಲ್ಲಿ ಗೌರವ ಪಡೆದು ಕೊಳ್ಳಬೇಕು ಎಂದು ತಿಳಿಸಿದರು.

ವಿದ್ಯೆಯಿಂದ ಒಳ್ಳೆಯ ಉದ್ಯೋಗ ಪಡೆದು ಕೊಂಡರೆ ಸಮಾಜದಲ್ಲಿ ಮಹಾನ್ ವ್ಯಕ್ತಿಯಾಗಿ ಬದುಕಲು ಸಾಧ್ಯ ಎಂದರಲ್ಲದೆ, ಕಾನೂನಿನ ಮುಂದೆ ಎಲ್ಲರೂ ಸಮಾನರು. ಯಾವುದೇ ತಪ್ಪು ಕಂಡು ಬಂದಲ್ಲಿ ಪ್ರಶ್ನೆ ಮಾಡುವುದು ನಮ್ಮ ಕರ್ತವ್ಯ, ಸಂವಿಧಾನದ ಹಕ್ಕುಗಳನ್ನು ತಿಳಿದು ಕೊಳ್ಳುವುದರ ಜೊತೆಗೆ ನಾವು ನಮ್ಮ ಜವಾಬ್ದಾರಿಯನ್ನು ನಿಭಾಯಿಸಿಕೊಳ್ಳಬೇಕು. ಮನುಷ್ಯರು ಹಣ, ಸಂಪತ್ತು ಇಲ್ಲದೆ ಇರುವ ಕಾರಣಕ್ಕೆ ತಮ್ಮ ಹಕ್ಕುಗಳನ್ನು ಹಾಗೂ ತಮ್ಮ ಜವಾಬ್ದಾರಿಯನ್ನು ನಿಭಾಯಿಸಿಕೊಳ್ಳುವುದರಲ್ಲಿ ವಿಫಲರಾಗಬಾರದು ಎಂದು ತಿಳಿಸಿದರು.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಜಿ.ಕೆ.ದಾಕ್ಷಾಯಿಣಿ ಅವರು ಮಾತನಾಡಿ, ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರದಲ್ಲಿ ಸುಗಮ ಎಂಬ ಯೋಜನೆಡಿಯಲ್ಲಿ ಕೌಶಲ್ಯ ಅಭಿವೃದ್ಧಿ ಇಲಾಖೆಯಿಂದ ನಿರುದ್ಯೋಗಿಗಳಿಗೆ ತರಬೇತಿ ನೀಡಿ ಕೆಲಸ ಕೊಡಿಸಬಹುದಾಗಿದೆ. ಉಚಿತವಾಗಿ ವೈದ್ಯಕೀಯ ವ್ಯವಸ್ಥೆ ಹಾಗೂ ಮಕ್ಕಳಿಗೆ ಉಚಿತವಾಗಿ ವಿದ್ಯಾಭ್ಯಾಸ ನೀಡುವಂತಹ ಯೋಜನೆ ಇದಾಗಿದೆ ಎಂದರು.

ವಕೀಲರ ಸಂಘದ ಅಧ್ಯಕ್ಷ ಕಾರ್ಲೆ ಮೊಗಣ್ಣಗೌಡ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ದಿಲೀಪ್, ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷರಾದ ಮಧುಕುಮಾರಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಪ್ಯಾನಲ್ ವಕೀಲೆ ರೂಪ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಅಪಘಾತ ತಡೆಗೆ ರಸ್ತೆ ಸುರಕ್ಷತಾ ಕ್ರಮ ಕೈಗೊಳ್ಳಿ

• ಪ್ರಜೋದಯ ವರದಿ

ಹಾಸನ: ಜಿಲ್ಲೆಯಲ್ಲಿ ರಸ್ತೆ ಅಪಘಾತಗಳು ಹೆಚ್ಚು ಸಂಭವಿಸುತ್ತಿದ್ದು, ಅಪಘಾತದಿಂದ ಮರಣ ಹೊಂದುವುದನ್ನು ತಡೆಗಟ್ಟಲು ಸುರಕ್ಷತಾ ಕ್ರಮ ಕೈಗೊಳ್ಳಲು ಕ್ರಮ ವಹಿಸುವಂತೆ ಜಿಲ್ಲಾಧಿಕಾರಿ ಲತಾಕುಮಾರಿ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಬುಧವಾರ ನಡೆದ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಅಪಘಾತಗಳ ತಡೆಗೆ ಕ್ರಿಯಾ ಯೋಜನೆ ತಯಾರಿಸಿ ಎಂದು ಸೂಚಿಸಿದರಲ್ಲದೆ, ಸಾವಿನ ಪ್ರಮಾಣ ಕಡಿಮೆ ಮಾಡಲು ಅಧಿಕಾರಿಗಳು ಸಮನ್ವಯತೆಯಿಂದ ಕರ್ತವ್ಯ ನಿರ್ವಹಿಸಬೇಕು ಎಂದು ತಿಳಿಸಿದರು.

ಅಪಘಾತಗಳು ಸಂಭವಿಸುತ್ತಿರುವ ಬ್ಲಾಕ್ ಸ್ಪಾಟ್ ಗುರುತಿಸಿ ಯಾವ ಕಾರಣಕ್ಕೆ ಅಪಘಾತ ಸಂಭವಿಸುತ್ತಿವೆ ಎಂಬುದನ್ನು ಗಂಭೀರವಾಗಿ ಪರಿಗಣಿಸಿ, ತಡೆಗಟ್ಟಲು ಏನು ಕ್ರಮ ಕೈಗೊಳ್ಳಬೇಕು ಎಂಬುದರ ಬಗ್ಗೆ ಹಾಗೂ ಅಪಘಾತಗಳಿಂದ ಸಂಭವಿಸಿರುವ ಮರಣಗಳ ಆಡಿಟ್ ಆಗಬೇಕು, ಈ ನಿಟ್ಟಿನಲ್ಲಿ ಒಂದು ತಿಂಗಳೊಳಗೆ ವರದಿ ನೀಡುವಂತೆ ಸೂಚಿಸಿದರು.

ಸಾರ್ವಜನಿಕರಿಗೆ ಅನುಕೂಲವಾಗುವಂತೆ ರಸ್ತೆ ಸುರಕ್ಷತೆಗೆ ಸಹಾಯವಾಣಿ ತೆರೆಯಬೇಕು, ಮೋಟಾರು ವಾಹನಕ್ಕೆ ಸಂಬಂಧಿಸಿದಂತೆ ಸರ್ಕಾರದ ಮಾರ್ಗ ಸೂಚಿಗಳನ್ನು ಅನುಸರಿಸಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಆದ್ಯತೆ ನೀಡುವಂತೆ ನಿರ್ದೇಶನ ನೀಡಿದರು.

ರಸ್ತೆ ಅಪಘಾತಗಳು ಸಂಭವಿಸಿದ ಸಂದರ್ಭದಲ್ಲಿ ತಕ್ಷಣ ಸ್ಪಂದಿಸಿ 15 ನಿಮಿಷದಲ್ಲಿ ಸ್ಥಳಕ್ಕೆ ಅಂಬುಲೆನ್ಸ್ ಹೋಗಬೇಕು. ಈ ನಿಟ್ಟಿನಲ್ಲಿ ಆರೋಗ್ಯ ಇಲಾಖೆ ಅಧಿಕಾರಿಗಳು ತೀವ್ರ ನಿಗಾ ವಹಿಸಬೇಕು. ಅಪಘಾತಗಳಿಂದ ಸಾವು ಸಂಭವಿಸುವುದನ್ನು ತಡೆಗಟ್ಟಲು ವಾಹನ ಚಾಲನೆ ಮಾಡುವಾಗ ಸುರಕ್ಷತೆಗಾಗಿ ಕಡ್ಡಾಯವಾಗಿ ಸೀಟ್ ಬೆಲ್ಟ್ ಹಾಗೂ ಹೆಲ್ಮೆಟ್ ಧರಿಸಬೇಕು ಎಂದು ತಿಳಿಸಿದರು.

ತಾಲ್ಲೂಕು ಮಟ್ಟದಲ್ಲಿ ಸಹ ಸಮಿತಿ ರಚನೆ ಮಾಡಿ ಪ್ರತಿವಾರ ಸಭೆ ನಡೆಸಿ ರಸ್ತೆ ಸುರಕ್ಷತೆಗೆ ಕ್ರಮ ವಹಿಸಲು ಅಧಿಕಾರಿಗಳಿಗೆ ಸೂಚಿಸಿದರು.

ಅಪರ ಜಿಲ್ಲಾಧಿಕಾರಿ ಹೆಚ್.ಕೆ. ಕೃಷ್ಣಮೂರ್ತಿ ಅವರು ಮಾತನಾಡಿ, ರಸ್ತೆ ಗುಂಡಿಗಳನ್ನು ಮುಚ್ಚಲು ಮುಂಜಾಗ್ರತೆ ವಹಿಸಿ ಕ್ರಮ ಕೈಗೊಳ್ಳಬೇಕು. ಕೆ.ಎಸ್.ಆರ್.ಟಿ.ಸಿ.ಬಸ್ ಚಾಲಕರು ವಾಹನವನ್ನು ಶಿಸ್ತು ಬದ್ಧವಾಗಿ ಚಾಲನೆ ಮಾಡುವಂತೆ ತಿಳುವಳಿಕೆ ನೀಡಲು ಹೇಳಿದರಲ್ಲದೆ, ರಾಷ್ಟ್ರೀಯ ಹೆದ್ದಾರಿಯಲ್ಲಿ ನಡೆಯುತ್ತಿರುವ ಫ್ಲೈ ಓವರ್ ಕಾಮಗಾರಿ ಕೆಲಸವನ್ನು ಶೀಘ್ರವಾಗಿ ಪೂರ್ಣಗೊಳಿಸುವುದರ ಜೊತೆಗೆ ಗುಣಮಟ್ಟಕ್ಕೆ ಹೆಚ್ಚಿನ ಆದ್ಯತೆ ನೀಡುವಂತೆ ಸೂಚಿಸಿದರು.

ಸಭೆಯಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಜರಿದ್ದರು.

ರೋಟರಿ ಅಧ್ಯಕ್ಷ ಸ್ಥಾನ ಜವಾಬ್ದಾರಿಯ ಪ್ರತೀಕ

ಬಿ.ಬಿ.ಶಿವರಾಜು ಬೇಲೂರು ರೋಟರಿ ಕ್ಲಬ್ ಅಧ್ಯಕ್ಷ

• ಪ್ರಜೋದಯ ವರದಿ

ಬೇಲೂರು: ರೋಟರಿ ಅಧ್ಯಕ್ಷಸ್ಥಾನವು ಅಧಿಕಾರದ ಸಂಕೇತವಲ್ಲ, ಸಮಾಜ ಸೇವೆಯ ಜವಾಬ್ದಾರಿಯ ಪ್ರತೀಕವಾಗಿದೆ ಎಂದು ರೋಟರಿ ಕ್ಲಬ್‌ನ ಟಿಬಿ ಜಾಗೃತಿ ಮತ್ತು ತಡೆಗಟ್ಟುವಿಕೆ ಸಮಿತಿಯ ಅಧ್ಯಕ್ಷೆ ಡಾ. ಬಿ.ಎಸ್. ಪ್ರೀತಿ ಮೋಹನ್ ಹೇಳಿದರು.

ಪಟ್ಟಣದ ವಿ.ಆರ್. ಕನ್ವೆನ್ಷನ್ ಸಭಾಂಗಣದಲ್ಲಿ ನಡೆದ ರೋಟರಿ ಕ್ಲಬ್ ಬೇಲೂರಿನ 2026-27ನೇ ಸಾಲಿನ ಪದಗ್ರಹಣ ಸಮಾರಂಭದಲ್ಲಿ ನೂತನ ಅಧ್ಯಕ್ಷರಾಗಿ ಬಿ.ಬಿ. ಶಿವರಾಜು ಹಾಗೂ ಕಾರ್ಯದರ್ಶಿಯಾಗಿ ಆಯ್ಕೆಯಾದ ರಾಘವೇಂದ್ರ ಅವರ ಅಧಿಕಾರ ಸ್ವೀಕಾರ ಸಮಾರಂಭದಲ್ಲಿ ಮಾತನಾಡಿದ ಅವರು, ವಿಶ್ವವನ್ನು ಪೋಲಿಯೋ ಮುಕ್ತಗೊಳಿಸುವ ಅಭಿಯಾನದಲ್ಲಿ ರೋಟರಿ ಸಂಸ್ಥೆಯ ಕೊಡುಗೆ ಐತಿಹಾಸಿಕವಾಗಿದ್ದು, ಆರೋಗ್ಯ, ಶಿಕ್ಷಣ, ಪರಿಸರ ಸಂರಕ್ಷಣೆ ಹಾಗೂ ಮಾನವೀಯ ಸೇವೆಗಳ ಮೂಲಕ ಸಮಾಜದ ದುರ್ಬಲ ವರ್ಗಗಳ ಬದುಕಿನಲ್ಲಿ ರೋಟರಿ ಸಂಸ್ಥೆ ಆಶಾಕಿರಣ ಮೂಡಿಸುತ್ತಿದೆ. ರೋಟರಿ ಅಧ್ಯಕ್ಷ ಸ್ಥಾನವು ನಾಯಕತ್ವದ ಜೊತೆಗೆ ಸಮಾಜದ ನಿರೀಕ್ಷೆಗಳನ್ನು ಸಾಕಾರಗೊಳಿಸುವ ಮಹತ್ತರ ಹೊಣೆಗಾರಿಕೆಯಾಗಿದೆ ಎಂದು ಹೇಳಿದರು.

ರೋಟರಿ ಜಿಲ್ಲಾ ಸಹಾಯಕ ಗವರ್ನರ್ ಡಾ.ಎಸ್.ಗಣೇಶ್ ಮಾತನಾಡಿ, ರೋಟರಿ ಸದಸ್ಯರು ತಮ್ಮ ಸಮಯ, ಶ್ರಮ ಮತ್ತು ಸಂಪನ್ಮೂಲಗಳನ್ನು ಸಮಾಜಸೇವೆಗೆ ಮೀಸಲಿಡುವ ಮೂಲಕ ಮಾನವೀಯ ಮೌಲ್ಯಗಳನ್ನು ಬೆಳೆಸುತ್ತಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ, ಶಿಕ್ಷಣ, ಪರಿಸರ ಮತ್ತು ಯುವಜನ ಸೇವಾ ಕಾರ್ಯಕ್ರಮಗಳನ್ನು ಮತ್ತಷ್ಟು ವಿಸ್ತರಿಸುವ ಮೂಲಕ ಬೇಲೂರು ರೋಟರಿ ಕ್ಲಬ್ ಮಾದರಿ ಸಂಸ್ಥೆಯಾಗಿ ಬೆಳೆಯಲಿ ಎಂದು ಆಶಿಸಿದರು.

ನೂತನ ಅಧ್ಯಕ್ಷ ಬಿ.ಬಿ.ಶಿವರಾಜು ಮಾತನಾಡಿ, ರೋಟರಿಯ ಘನತೆ ಮತ್ತು ಸಾರ್ವಜನಿಕರ ವಿಶ್ವಾಸವನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಎಲ್ಲ ಸದಸ್ಯರ ಸಹಕಾರದೊಂದಿಗೆ ಕಾರ್ಯ ನಿರ್ವಹಿಸುವುದಾಗಿ ತಿಳಿಸಿದರಲ್ಲದೆ, ಗ್ರಾಮೀಣ ಪ್ರದೇಶಗಳಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರಗಳು, ರಕ್ತದಾನ ಶಿಬಿರಗಳು, ಸರ್ಕಾರಿ ಶಾಲೆಗಳ ಅಭಿವೃದ್ಧಿ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ, ಪರಿಸರ ಸಂರಕ್ಷಣೆ, ಸದಸ್ಯತ್ವ ವೃದ್ಧಿ ಹಾಗೂ ಶಾಶ್ವತ ಸಮಾಜಮುಖಿ ಯೋಜನೆಗಳಿಗೆ ಆದ್ಯತೆ ನೀಡಲಾಗುವುದು ಎಂದು ಹೇಳಿದರು.

ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ವಿತರಿಸಲಾಯಿತಲ್ಲದೆ, ಹೊಸ ಸದಸ್ಯರನ್ನು ರೋಟರಿ ಕುಟುಂಬಕ್ಕೆ ಸೇರ್ಪಡೆಗೊಳಿಸುವ ಮೂಲಕ ಸದಸ್ಯತ್ವ ಪ್ರಮಾಣಪತ್ರಗಳನ್ನು ನೀಡಲಾಯಿತು.

ಕಾರ್ಯಕ್ರಮದಲ್ಲಿ ನಿಕಟಪೂರ್ವ ಅಧ್ಯಕ್ಷ ರಂಗನಾಥ, ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಉಪಾಧ್ಯಕ್ಷ ಎಚ್.ಬಿ.ಮದನಗೌಡ, ಜಿಲ್ಲಾಧ್ಯಕ್ಷ ಜೆ.ಆರ್.ಕೆಂಚೇಗೌಡ, ಝೋನಲ್ ಲೆಫ್ಟಿನೆಂಟ್ ವೀರೇಂದ್ರ ಕುಮಾರ್, ಕಾರ್ಯದರ್ಶಿ ರಾಘವೇಂದ್ರ, ಮಾಜಿ ಕಾರ್ಯದರ್ಶಿ ರಮೇಶ್ ಹಾಗೂ ರೋಟರಿ ಸದಸ್ಯರು ಉಪಸ್ಥಿತರಿದ್ದರು.

ಪೆಟ್ರೋಲ್ ಬಂಕ್‌ಗಳಲ್ಲಿ ಉಚಿತ ಸೌಲಭ್ಯ

• ಪ್ರಜೋದಯ ವರದಿ

ಹಾಸನ: ಜಿಲ್ಲೆಯ ಗ್ರಾಹಕರಿಗೆ ಎಲ್ಲಾ ಪೆಟ್ರೋಲ್ ಬಂಕ್‌ಗಳಲ್ಲಿ ಸಾರ್ವಜನಿಕರಿಗೆ 6 ಉಚಿತ ಸೌಲಭ್ಯ ಗಳನ್ನು ಒದಗಿಸಬೇಕಿದ್ದು, ವಾಹನದ ಟೈರ್‌ಗಳಿಗೆ ಉಚಿತ ಗಾಳಿ, ಬಂಕ್ ಆವರಣದಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರು, ಗ್ರಾಹಕರು ಮತ್ತು ಸಿಬ್ಬಂಧಿ ಇಬ್ಬರಿಗೂ ಶೌಚಾಲಯ ಸೌಲಭ್ಯ, ತುರ್ತು ಸಂದರ್ಭಗಳಲ್ಲಿ ಪ್ರಥಮ ಚಿಕಿತ್ಸಾ ಕಿಟ್‌ಗಳ ಸೌಲಭ್ಯ, ಗ್ರಾಹಕರು ನಿಖರವಾದ ಇಂಧನವನ್ನು ಪಡೆಯುವಲ್ಲಿ ಪೆಟ್ರೋಲ್ ಬಂಕ್ ಸಿಬ್ಬಂದಿಯ ಸಹಕಾರ ಹಾಗೂ ಪೆಟ್ರೋಲ್ ಮತ್ತು ಡೀಸೆಲ್‌ನ ಗುಣಮಟ್ಟದ ಕುರಿತು ಗ್ರಾಹಕರಿಗೆ ಮಾಹಿತಿ ಒದಗಿಸುವುದು ಹಾಗೂ ಪೆಟ್ರೋಲ್ ಬಂಕ್ ಅವರಣದಲ್ಲಿ ತುರ್ತು ಸಂಪರ್ಕ ಸಂಖ್ಯೆಗಳನ್ನು ಗ್ರಾಹಕರಿಗೆ ಕಾಣುವಂತೆ ಸ್ಪಷ್ಟ

ಬೀದಿ ಬದಿ ವ್ಯಾಪಾರಿಗಳಿಗೆ ಸ್ವರೂಪ್ ಅಭಯ

• ಪ್ರಜೋದಯ ವರದಿ

ಹಾಸನ: ಸಾಲಗಾಮೆ ರಸ್ತೆಯಲ್ಲಿ ಪ್ರತಿ ಮಂಗಳವಾರ ನಡೆಯುವ ವಾರದ ಸಂತೆಯನ್ನು ಮಹಾನಗರ ಪಾಲಿಕೆ ನಿಷೇಧಿಸಿರುವ ಹಿನ್ನಲೆಯಲ್ಲಿ ಬೀದಿ ಬದಿ ವ್ಯಾಪಾರಿಗಳು ಪಾಲಿಕೆ ಎದುರು ಬುಧವಾರ ಪ್ರತಿಭಟನೆ ನಡೆಸಿದರು.

ಕಚೇರಿ ಎದುರು ವ್ಯಾಪಾರಿಗಳು ಜಮಾಯಿಸಿರುವ ಸುದ್ದಿ ತಿಳಿದು ಭೇಟಿ ನೀಡಿದ ಶಾಸಕ ಹೆಚ್.ಪಿ. ಸ್ವರೂಪ್ ಅವರು ಜಿಲ್ಲಾಧಿಕಾರಿ ಜೊತೆಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವವರೆಗೆ ವ್ಯಾಪಾರಿಗಳಿಗೆ ತೊಂದರೆ ನೀಡದಂತೆ ಅಧಿಕಾರಿಗಳಿಗೆ ಸೂಚಿಸಿದರು. ಆ ಬಳಿಕ ಪ್ರತಿಭಟನಾಕಾರರು ವಾಪಾಸ್ಸಾದರು.

ಬೆಳಗ್ಗೆಯಿಂದ ರಾತ್ರಿ ವರೆಗೆ ರಸ್ತೆ ಬದಿ ವ್ಯಾಪಾರ ವಹಿವಾಟು ನಡೆಸುವುದರಿಂದ ಸಂಚಾರಕ್ಕೆ ತೊಂದರೆಯಾಗುತ್ತಿದೆ. ಫುಟ್‌ಪಾತ್ ಜಾಗ ಬಿಟ್ಟು ನೇರವಾಗಿ ರಸ್ತೆಗೆ ತರಕಾರಿ ಮತ್ತಿತರೆ ಪದಾರ್ಥಗಳನ್ನು ಇಟ್ಟುಕೊಳ್ಳುತ್ತಾರೆ. ಸಂತೆ ಮುಗಿದ ಬಳಿಕ ತ್ಯಾಜ್ಯವನ್ನು ಅಲ್ಲೇ ಬಿಟ್ಟು ಹೋಗುತ್ತಾರೆ. ಇದರಿಂದ ನಗರದ ಸೌಂದರ್ಯಕ್ಕೆ ಧಕ್ಕೆಯಾಗುತ್ತಿದೆ. ಜೊತೆಗೆ ಫುಟ್‌ಪಾತ್ ತೆರವು ಕಾರ್ಯಾಚರಣೆ ಕೈಗೊಂಡಿರುವುದರಿಂದ ರಸ್ತೆಯಲ್ಲಿ ಸಂತೆ ನಡೆಸುವುದು ನಿಷಿದ್ಧ ಎಂಬುದು ಮಹಾನಗರ ಪಾಲಿಕೆ ವಾದವಾಗಿದೆ.

ಪರ್ಯಾಯ ವ್ಯವಸ್ಥೆಗೆ ಆಗ್ರಹ

ಬೀದಿ ಬದಿ ತರಕಾರಿ, ಹಣ್ಣು ವ್ಯಾಪಾರ ಮಾಡಿಕೊಂಡು ದಶಕಗಳಿಂದ ಬದುಕು ಕಟ್ಟಿಕೊಂಡಿದ್ದೇವೆ. ಸಂತೆ ನಡೆಸಲು ಪರ್ಯಾಯ ಮಾರ್ಗ ಹೇಳದೆ ಏಕಾಏಕಿ ಸ್ಥಗಿತಗೊಳಿಸಿದರೆ ಏನು ಮಾಡಬೇಕು. ಕೋವಿಡ್ ಸಮಯದಲ್ಲಿ ಜಿಲ್ಲಾ ಕ್ರೀಡಾಂಗಣದಲ್ಲಿ ವ್ಯಾಪಾರಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಈಗಲೂ ವಾರದಲ್ಲಿ ಒಂದು ದಿನ ಕ್ರೀಡಾಂಗಣ ಬಿಟ್ಟುಕೊಡಬೇಕು. ಜೊತೆಗೆ ಶೌಚಾಲಯ ಹಾಗು ನೆರಳಿನ ವ್ಯವಸ್ಥೆ ಮಾಡಿಕೊಡಬೇಕೆಂದು ವ್ಯಾಪಾರಿಗಳು ಶಾಸಕರಿಗೆ ಮನವಿ ಸಲ್ಲಿಸಿದರು.

ಈ ವೇಳೆ ಮಾತನಾಡಿದ ಶಾಸಕ ಹೆಚ್.ಪಿ.ಸ್ವರೂಪ್ ಅವರು, ನಗರದಲ್ಲಿ ತುಂಬಾ ವರ್ಷಗಳಿಂದ ನಡೆದುಕೊಂಡು ಬಂದಿರುವ ಮಂಗಳವಾರದ ಸಂತೆಗೆ ಪಾಲಿಕೆ ಅಧಿಕಾರಿಗಳು ತಡೆಯೊಡ್ಡಿರುವುದು ಗಮನಕ್ಕೆ ಬಂದಿದೆ. ಯಾರು ಏನೇ ಹೇಳಿದರೂ ವ್ಯಾಪಾರಿಗಳು ಭಯ ಪಡುವ ಅಗತ್ಯವಿಲ್ಲ. ಯಾವುದೇ ಕ್ರಮ ಹಾಗು ತೀರ್ಮಾನ ಮಾಡುವವರೆಗೂ ಅದೇ ಸ್ಥಳದಲ್ಲಿ ಸಂತೆ ನಡೆಸುವಂತೆ ಅನುವು ಮಾಡಿಕೊಡಬೇಕು. ಬೀದಿ ಬದಿ ವ್ಯಾಪಾರಿಗಳಿಗೆ ವಿನಾಕಾರಣ ತೊಂದರೆ ನೀಡಬೇಡಿ ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಇದೇ ವೇಳೆ ಜನನ ಮತ್ತು ಮರಣ ಪ್ರಮಾಣ ಪತ್ರಗಳನ್ನು ವಿತರಿಸಲು ತಡವಾಗುತ್ತಿರುವ ಕಾರಣ ಸಾಲಿನಲ್ಲಿ ನಿಂತಿದ್ದ ಸಾರ್ವಜನಿಕರೊಂದಿಗೆ ಮಾಹಿತಿ ಪಡೆದು ಪ್ರಮಾಣ ಪತ್ರ ನೀಡಲು ವಿಳಂಬ ಮಾಡಬೇಡಿ ಎಂದು ಸೂಚಿಸಿದರು.

ಟ್ರಂಪ್ ದ್ವಂದ್ವ ನೀತಿಗೆ ನಲುಗಿದ ಉದ್ಯಮ

ಶುಲ್ಕ ವಿಧಿಸುವ ವಿಚಾರದಲ್ಲಿ ಗೊಂದಲದ ಹೇಳಿಕೆ | ಅನೇಕ ಪ್ರಶ್ನೆಗಳಿಗೆ ಸಿಗದ ಉತ್ತರ

• ಪ್ರಜೋದಯ ವರದಿ

ನವದೆಹಲಿ: ಹೊರ್ಮುಜ್ ಜಲಸಂಧಿಯಲ್ಲಿ ಸಂಚರಿಸುವ ಹಡಗುಗಳ ಮೇಲೆ ಶೇ. 20 ರಷ್ಟು ಶುಲ್ಕ ವಿಧಿಸುವುದಾಗಿ ಘೋಷಿಸಿದ್ದ ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಒಂದೇ ದಿನದಲ್ಲಿ ತಮ್ಮ ನಿಲುವು ಬದಲಿಸಿದ್ದಾರೆ.

ಹಡಗುಗಳಿಗೆ ನೀಡುವ ರಕ್ಷಣೆಗೆ ಬದಲಾಗಿ ಈ ಶುಲ್ಕ ವಿಧಿಸಲಾಗುತ್ತದೆಂದು ಅವರು ಹೇಳಿದ್ದರು. ಆದರೆ ಈಗ, ಅಮೇರಿಕಾದಲ್ಲಿ ಹೂಡಿಕೆ ಮಾಡುವ ಕೊಲ್ಲಿ ರಾಷ್ಟ್ರಗಳಿಗೆ ಹೊರ್ಮುಜ್‌ನಲ್ಲಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವುದಾಗಿ ಭರವಸೆ ನೀಡಿದ್ದಾರೆ.ಅಮೇರಿಕಾ ಅಧ್ಯಕ್ಷರ ಹಠಾತ್ ನಿರ್ಧಾರ ಬದಲಾವಣೆಯು ಹಲವು ರಾಷ್ಟ್ರಗಳಲ್ಲಿ, ಹಡಗು ಕಂಪನಿಗಳಲ್ಲಿ ಹಾಗು ಉದ್ಯಮಗಳಲ್ಲಿ ದ್ವಂದ್ವ ಮೂಡಿಸಿದೆ. ಜಾಗತಿಕ ವ್ಯಾಪಾರದ ಪ್ರಮುಖ ಹೆಬ್ಬಾಗಿಲಾಗಿರುವ ಹೊರ್ಮುಜ್‌ನ ಭವಿಷ್ಯದ ಬಗ್ಗೆಯೂ ಅನಿಶ್ಚಿತತೆ ಮೂಡಿದೆ.

ಹೊರ್ಮುಜ್‌ನಲ್ಲಿ ಸಂಚರಿಸುವ ಹಡಗುಗಳಿಗೆ ಅಮೇರಿಕಾ ಸೇನೆ ರಕ್ಷಣೆ ನೀಡಲಿದ್ದು, ಅದಕ್ಕೆ ಪ್ರತಿಯಾಗಿ ಶೇ.20ರಷ್ಟು ಶುಲ್ಕ ವಿಧಿಸಲಾಗುವುದೆಂದು ಟ್ರಂಪ್ ಜು.13ರಂದು ಹೇಳಿದ್ದರು. ಮರುದಿನವೇ ವರಸೆ ಬದಲಿಸಿದ ಅವರು, ಕೊಲ್ಲಿ ರಾಷ್ಟ್ರಗಳು ಅಮೇರಿಕಾದಲ್ಲಿ ದೊಡ್ಡ ಪ್ರಮಾಣದ ಹೂಡಿಕೆ ಒಪ್ಪಂದ ಮಾಡಿಕೊಂಡರೆ, ಅವರ ಹಡಗುಗಳಿಗೆ ಮುಕ್ತ ಸಂಚಾರ ಕಲ್ಪಿಸುವುದಾಗಿ ಹೇಳಿದ್ದಾರೆ. ಆದರೆ ಹಲವು ಪ್ರಶ್ನೆಗಳಿಗೆ ಉತ್ತರ ಸಿಕ್ಕಿಲ್ಲ. ಹೊಸ ವ್ಯವಸ್ಥೆ ಹೇಗೆ ಕೆಲಸ ಮಾಡುತ್ತದೆ. ಯಾವೆಲ್ಲಾ ದೇಶಗಳು ಹೂಡಿಕೆ ಮಾಡಬೇಕು. ತಮ್ಮ ಹಡಗುಗಳಿಗೆ ರಕ್ಷಣೆ ಬೇಕಾದರೆ ಕೊಲ್ಲಿ ಹೊರತಾದ ಜಪಾನ್ ಹಾಗು ದಕ್ಷಿಣ ಕೊರಿಯಾದಂತಹ ಇತರೆ ದೇಶ ಗಳೂ ಕೂಡ ಅಮೇರಿಕಾದೊಂದಿಗೆ ಹೂಡಿಕೆ ಒಪ್ಪಂದ ಮಾಡಿಕೊಳ್ಳಬೇಕೆ ಎನ್ನುವುದರ ಬಗ್ಗೆ ಖಚಿತತೆ ಇಲ್ಲ.

ಹಡಗು ಕಂಪನಿಗಳ ಆತಂಕ: ಪದೇ ಪದೇ ಬದಲಾಗುತ್ತಿರುವ ನೀತಿಯಿಂದಾಗಿ ಅಂತರ ರಾಷ್ಟ್ರೀಯ ವ್ಯಾಪಾರವನ್ನು ಯೋಜಿಸಲು ತೊಡಕಾಗುತ್ತಿದೆ ಎಂದು ಹಡಗು ಕಂಪನಿಗಳು ಹೇಳಿವೆ. ಅಮೇರಿಕಾ ಸೇನಾ ರಕ್ಷಣೆ ನೀಡುವು ದರಿಂದ ಮಾತ್ರ ಅಪಾಯದಿಂದ ಪಾರಾಗಲು ಸಾಧ್ಯವಿಲ್ಲದಿರುವುದರಿಂದ ಹಲವು ಕಂಪನಿಗಳು ಪರ್ಷಿಯನ್ ಕೊಲ್ಲಿಗೆ ಹಡಗುಗಳನ್ನು ಕಳುಹಿಸಲು ಹಿಂಜರಿಯುತ್ತಿವೆ. ಅಂತಾರ್ರಾಷ್ಟ್ರೀಯ ಸಮುದ್ರ ಮಾರ್ಗದ ಸುಗಮ ಸಂಚಾರವನ್ನು ಶುಲ್ಕ ಅಥವಾಹೂಡಿಕೆಗೆ ಅಮೇರಿಕಾ ತಳುಕು ಹಾಕಿದರೆ, ಇತರ ದೇಶಗಳೂ ಕೂಡ ಇದೇ ತೆರೆನಾದ ಧೋರಣೆ ಅನು ಸರಿಸುವ ಸಾಧ್ಯತೆ ಇದೆ ಎಂದು ತಜ್ಞರು ಅಭಿಪ್ರಾಯ ಪಡುತ್ತಾರೆ. ಒಂದು ವೇಳೆ ಹೀಗೆ ಆಗಿದ್ದೇ ಆದಲ್ಲಿ, ವಿಶ್ವದಾದ್ಯಂತ ಹಡಗು ಸಾಗಣೆವೆಚ್ಚ ಏರಿಕೆಯಾಗಲಿದೆ.ಅಂತಾರ್ರಾಷ್ಟ್ರೀಯ ಸಮುದ್ರ ಕಾನೂನು ದುರ್ಬಲವಾಗಲಿದೆ. ಅದರಿಂದ ಇಂಧನ ದರ ಏರಿಕೆಯಾಗಿ ಅದರ ಪರಿಣಾಮ ಇತರೆ ವಸ್ತುಗಳ ಮೇಲೆಯೂ ಬೀಳಲಿದೆ. ಜಾಗತಿಕ ಹಣದುಬ್ಬರಕ್ಕೆ ಕಾರಣವಾಗಲಿದೆ.

ಅಂತಾರ್ರಾಷ್ಟ್ರೀಯ ಜಲಸಂಧಿ ಮೂಲಕ ಹಾದು ಹೋಗಲು ಶುಲ್ಕ ವಿಧಿಸುವುದಕ್ಕೆ ಯಾವುದೇ ಕಾನೂನು ಮಾರ್ಗಗಳಿಲ್ಲವೆಂದು ಜಾಗತಿಕ ಹಡಗು ಯಾನದ ಉಸ್ತುವಾರಿ ವಹಿಸಿರುವ ವಿಶ್ವ ಸಂಸ್ಥೆಯ ಅಂತಾರ್ರಾಷ್ಟ್ರೀಯ ಕಡಲ ಸಂಸ್ಥೆ (ಐಎಂಒ) ಹೇಳಿದೆ. ಕಡಲ ಸಂಚಾರಕ್ಕೆ ಭದ್ರತೆ ಒದಗಿಸುವ ರಾಷ್ಟ್ರಗಳು ಶುಲ್ಕ ವಿಧಿಸಬಹುದು ಎನ್ನುವ ಟ್ರಂಪ್ ಅವರ ಹೇಳಿಕೆಯನ್ನು ಇರಾನ್ ಬೆಂಬಲಿಸಿದೆ. ಆದರೆ ಶೇ.20 ಶುಲ್ಕ ದುಬಾರಿ ಎಂದು ಹೇಳಿದೆ.

ಆಕ್ರಮಣ ನಿಲ್ಲುವವರೆಗೆ ಹೊರ್ಮುಜ್ ಬಂದ್

ಟೆಹರಾನ್: ನಮ್ಮ ಮೇಲೆ ಅಮೇರಿಕಾದ ಆಕ್ರಮಣಕಾರಿ ಕೃತ್ಯಗಳು ನಿಲ್ಲುವವರೆಗೂ ಹೊರ್ಮುಜ್ ಜಲಸಂಧಿಯು ಮುಚ್ಚಿರಲಿದೆಯೆಂದು ಇರಾನ್‌ನ ರೆವಲ್ಯೂಷನರಿ ಗಾರ್ಡ್ ಹೇಳಿದೆ.

ಪಶ್ಚಿಮ ಏಷ್ಯಾ ಭಾಗದಲ್ಲಿ ಅಮೇರಿಕಾವು ಮತ್ತೆ ದಾಳಿ ನಡೆಸುತ್ತಿರುವ ಬೆನ್ನಲ್ಲೇ, ಎಲ್ಲಾ ತೈಲ ಸರಬರಾಜು ಮಾರ್ಗಗಳನ್ನು ಹಿಡಿತಕ್ಕೆ ತೆಗೆದುಕೊಳ್ಳುತ್ತೇವೆ. ನಮ್ಮ ಇಂಧನವು ಎಲ್ಲರಿಗೂ ಸಿಗ ಬೇಕು ಇಲ್ಲದಿದ್ದರೆ ಯಾರಿಗೂ ಸಿಗಬಾರದೆಂದು ಎಚ್ಚರಿಕೆ ನೀಡಿದೆ.

ಇರಾನ್ ಮೇಲೆ ಅಮೇರಿಕಾ ದಾಳಿ ನಡೆಸಿದ ನಂತರ, ಬಹರೇನ್ ಮತ್ತು ಕುವೈತ್‌ನಲ್ಲಿರುವ ಅವರ ಸೇನಾ ನೆಲೆಗಳ ಮೇಲೆ ನಾವು ದಾಳಿ ನಡೆಸಿದ್ದೇವೆಂದು ಹೇಳಿದೆ. ಅಮೇರಿಕಾ ಮತ್ತು ಇರಾನ್ ಸಂಘರ್ಷದಿಂದ ಹೊರ್ಮುಜ್ ಜಲಸಂಧಿಯಲ್ಲಿನ ಇಂಧನ ಸಾಗಾಟಕ್ಕೆ ತೊಂದರೆ ಯಾಗುತ್ತಿದ್ದು, ಜಾಗತಿಕ ತೈಲ ಕೊರತೆಗೆ ಕಾರಣವಾಗಿದೆ.

ಹೊರ್ಮುಜ್ ಜಲಸಂಧಿಯ ಮೂಲಕ ಸಾಗುವ ಸರಕು ಸಾಗಣೆ ಹಡಗುಗಳ ಮೇಲೆ ಶೇ. 20ರಷ್ಟು ಶುಲ್ಕ ವಿಧಿಸುವುದಾಗಿ ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದರು. ಆದರೆ, ಆ ಆದೇಶವನ್ನು ಒಂದೇ ದಿನದಲ್ಲಿ ಹಿಂಪಡೆದಿದ್ದಾರೆ. ಅದರ ನಡುವೆಯೇ ಇರಾನ್‌ನ ಸೇನಾ ನೆಲೆಗಳ ಮೇಲೆ ದಾಳಿ ಮಾಡಿರುವುದಾಗಿ ಅಮೇರಿಕಾ ಸೇನೆಯ ಸೆಂಟ್ರಲ್ ಕಮಾಂಡ್ ತಿಳಿಸಿದೆ.

ಹುಚ್ಚು ನಾಯಿ ದಾಳಿ: ಬಾಲಕನಿಗೆ ಗಂಭೀರ ಗಾಯ

• ಪ್ರಜೋದಯ ವರದಿ

ಅರಕಲಗೂಡು: ಬೀದಿಯಲ್ಲಿ ಆಟವಾಡುತ್ತಿದ್ದಾಗ ಹುಚ್ಚು ನಾಯಿಯ ದಾಳಿಯಲ್ಲಿ 8 ವರ್ಷದ ಬಾಲಕ ಗಂಭೀರ ಗಾಯಗೊಂಡಿರುವ ಘಟನೆ ತಾಲ್ಲೂಕಿನ ಕೊಣನೂರು ಹೋಬಳಿಯ ಚಿಕ್ಕಬೊಮ್ಮನಹಳ್ಳಿಯಲ್ಲಿ ಮಂಗಳವಾರ ನಡೆದಿದೆ.

ಕರ್ತಾಳು ಗ್ರಾಮದ ಗುಣಗೌಡ ಗಾಯಾಳು ಬಾಲಕ. ಅಜ್ಜಿ ಮನೆಗೆ ಬಂದಿದ್ದ ವೇಳೆ ಘಟನೆ ಸಂಭವಿಸಿದೆ. ಹುಚ್ಚುನಾಯಿ ಏಕಾಏಕಿ ದಾಳಿ ನಡೆಸಿ ತಲೆ, ಮುಖ ಹಾಗು ಮೂಗಿನ ಭಾಗಕ್ಕೆ ಕಚ್ಚಿ ಗಂಭೀರ ಗಾಯಗೊಳಿಸಿದೆ.

ಸ್ಥಳೀಯರು ತಕ್ಷಣ ಬಾಲಕನನ್ನು ಕೊಣನೂರು ಸಮುದಾಯ ಆರೋಗ್ಯ ಕೇಂದ್ರಕ್ಕೆ ದಾಖಲಿಸಿ ಪ್ರಥಮ ಚಿಕಿತ್ಸೆ ಕೊಡಿಸಿದರು. ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಹಾಸನದ ಹಿಮ್ಸ್‌ಗೆ ರವಾನಿಸಲಾಗಿದೆ. ಘಟನೆ ಬಳಿಕ ಗ್ರಾಮದಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿದೆ. ಇದೇ ಹುಚ್ಚುನಾಯಿ ಮತ್ತಷ್ಟು ಜನರ ಮೇಲೂ ದಾಳಿ ನಡೆಸುವ ಭೀತಿ ಇರುವುದರಿಂದ ಸಂಬಂಧಪಟ್ಟ ಅಧಿಕಾರಿಗಳು ತಕ್ಷಣ ನಾಯಿಯನ್ನು ಹಿಡಿದು ಸಾರ್ವಜನಿಕರ ಸುರಕ್ಷತೆಗೆ ಅಗತ್ಯ ಕ್ರಮ ಕೈಗೊಳ್ಳ ಬೇಕೆಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಎಸ್‌ಐಆರ್: ಅವಧಿ ವಿಸ್ತರಿಸಿದ ಚುನಾವಣಾ ಆಯೋಗ

• ಪ್ರಜೋದಯ ವರದಿ

ನವದೆಹಲಿ: ಕರ್ನಾಟಕ, ದೆಹಲಿ, ಪಂಜಾಬ್ ಮತ್ತು ತೆಲಂಗಾಣದಲ್ಲಿ ಪ್ರಸ್ತುತ ನಡೆಯುತ್ತಿ ರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್ ಐಆರ್) ಪ್ರಕ್ರಿಯೆಯನ್ನು ಕೆಲವು ದಿನಗಳವರೆಗೆ ವಿಸ್ತರಿಸಿಚುನಾವಣಾ ಆಯೋಗ ಆದೇಶ ಹೊರಡಿಸಿದೆ.

ಕರ್ನಾಟಕದಲ್ಲಿ ಜು.29ರ ಬದಲಿಗೆ ಆ.8ರ ವರೆಗೆ ಗಣತಿ ನಮೂನೆ ವಿತರಿಸಲು ಅವಕಾಶ ನೀಡಲಾಗಿದೆ. ಕರಡು ಪಟ್ಟಿಯನ್ನು ಆ.5ರ ಬದಲಿಗೆ ಆ.17ರಂದು ಪ್ರಕಟಿಸಲಾಗುವುದೆಂದು ಆಯೋಗ ತಿಳಿಸಿದೆ. ರಾಜ್ಯದಲ್ಲಿ ಅಂತಿಮ ಮತದಾರರ ಪಟ್ಟಿಯನ್ನು ಆ.7ರ ಬದಲಿಗೆ ಆ.19 ರಂದು ಪ್ರಕಟಿಸಲಾಗುವುದೆಂದು ಪರಿಷ್ಕೃತ ಪ್ರಕಟಣೆ ತಿಳಿಸಿದೆ. ಇನ್ನು, ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಜು.29ರ ಬದಲಿಗೆ ಆ.8ರ ವರೆಗೆ ಗಣತಿ ನಮೂನೆ ವಿತರಿಸಲಾಗುತ್ತದೆ. ಕರಡು ಮತದಾರರ ಪಟ್ಟಿಯನ್ನು ಆ.5ರ ಬದಲಿಗೆ ಆ.17 ರಂದು ಪ್ರಕಟಿಸಲಾಗುವುದೆಂದು ತಿಳಿಸಿದೆ.

ಪಂಜಾಬ್‌ನಲ್ಲಿ ಗಣತಿ ನಮೂನೆ ವಿತರಣೆಯು ಜು.24ರ ಬದಲಿಗೆ ಆ.3ರ ವರೆಗೆ ಮುಂದು ವರಿಯಲಿದೆ. ಕರಡು ಮತದಾರರ ಪಟ್ಟಿಯನ್ನು ಜು.31ರ ಬದಲಿಗೆ ಆ.13 ರಂದು ಪ್ರಕಟವಾ ಗಲಿದೆ. ಅಂತಿಮ ಮತದಾರರ ಪಟ್ಟಿಯು ಅ.10ರ ಬದಲಿಗೆ ಅ.12 ರಂದು ಹೊರಬರಲಿದೆ. ತೆಲಂಗಾಣದಲ್ಲಿ ಕರಡು ಮತದಾರರ ಪಟ್ಟಿಯನ್ನು ಆ.10 ರಂದು ಹಾಗು ಅಂತಿಮ ಮತದಾರರ ಪಟ್ಟಿಯನ್ನು ಅ.12 ರಂದು ಪ್ರಕಟಿಸಲಾಗುವುದೆಂದು ತಿಳಿಸಿದೆ.

ಮನೆ ಕಳ್ಳತನ ತಡೆಗೆ ಜಾಗೃತಿಯೇ ಪ್ರಮುಖ ಅಸ್ತ್ರ

ಅಪರಾಧ ಚಟುವಟಿಕೆ ತಡೆಯಲು ನಮ್ಮೊಂದಿಗೆ ಸಹಕರಿಸಿ: ಡಿವೈಎಸ್‌ಪಿ

• ಪ್ರಜೋದಯ ವರದಿ

ಅರಸೀಕೆರೆ: ನಗರದಲ್ಲಿ ಜನಸಂಖ್ಯೆ ಯೊಂದಿಗೆ ವಸತಿ ಗೃಹಗಳ ಸಂಖ್ಯೆ ಯೂ ಹೆಚ್ಚುತ್ತಿದ್ದು, ಪೊಲೀಸ್ ಇಲಾಖೆಯೊಂದಿಗೆ ಸಾರ್ವಜನಿಕರೂ ಜವಾಬ್ದಾರಿಯುತವಾಗಿ ಸಹಕರಿಸಿದರೆ ಅಪರಾಧ ಚಟುವಟಿಕೆ ತಡೆಯ ಬಹುದೆಂದು ಡಿವೈಎಸ್ಪಿ ಗೋಪಿ ಅವರು ತಿಳಿಸಿದರು.

ಜಾಗೃತಿ ಕಾರ್ಯಕ್ರಮದ ಅಂಗ ವಾಗಿ ಬುಧವಾರ ಸಂಜೆ ಮಾರುತಿ ಬಡಾವಣೆಯಲ್ಲಿ ಆಯೋಜಿಸಿದ್ದ ಸಭೆಯಲ್ಲಿ ಮಾತನಾಡಿದ ಅವರು, ತಂತ್ರಜ್ಞಾನ ಬೆಳವಣಿಗೆಯೊಂದಿಗೆ ಕಳ್ಳರು ಹೊಸ ತಂತ್ರಗಳನ್ನು ಅಳವಡಿಸಿಕೊಂಡು ಮನೆ ಕಳ್ಳತನ ಹಾಗು ಸರಗಳ್ಳತನದಂತಹ ಕೃತ್ಯಗಳನ್ನು ಎಸಗುತ್ತಿದ್ದಾರೆ. ಇಂತಹ ಅಪರಾಧ ಗಳನ್ನು ತಡೆಗಟ್ಟಲು ಸಾರ್ವಜನಿಕರ ಜಾಗೃತಿಯೇ ಪರಿಣಾಮಕಾರಿ ಮಾರ್ಗ ವಾಗಿದೆ ಎಂದು ಹೇಳಿದರು.

ತುರ್ತು ಸಂದರ್ಭಗಳಲ್ಲಿ 24 ಗಂಟೆಯೂ ಕಾರ್ಯನಿರ್ವಹಿಸುವ 112 ಸಹಾಯವಾಣಿ ಸಂಖ್ಯೆಗೆ ಕರೆ ಮಾಡಿದರೆ ಸ್ಥಳೀಯ ಪೊಲೀಸರ ಸೇವೆ ತ್ವರಿತವಾಗಿ ದೊರೆಯುತ್ತದೆ. ಮನೆಯಿಂದ ಹೊರ ಹೋಗುವವರು ಬೀಗದ ಕೀಲಿಯನ್ನು ಸುಲಭವಾಗಿ ಸಿಗುವ ಸ್ಥಳದಲ್ಲಿ ಇಡಬಾರದು. ಪಾರ್ಸೆಲ್ ಬಂದಿದೆ ಎಂದು ಹೇಳಿ ಕೊಂಡು ಮನೆಗೆ ಬರುವ ಅಪರಿಚಿತರ ಬಗ್ಗೆ ಎಚ್ಚರಿಕೆ ವಹಿಸಬೇಕು. ಒಂಟಿಯಾಗಿ ವಾಸಿಸುವವರ ಮನೆಗಳ ಬಗ್ಗೆ ನೆರೆಹೊರೆಯವರು ಕಾಳಜಿ ವಹಿಸಿದರೆ ಕಳ್ಳತನ, ಸುಲಿಗೆ ಹಾಗೂ ಇತರ ಅಪರಾಧಗಳನ್ನು ತಡೆಯಲು ಸಾಧ್ಯವೆಂದು ತಿಳಿಸಿದರು.

ನಗರ ಪೊಲೀಸ್ ಠಾಣೆ ವೃತ್ತ ನಿರೀಕ್ಷಕ ಕೃಷ್ಣಕುಮಾರ್ ಮಾತನಾಡಿ, ಮನೆಯಿಂದ ಹೊರಡುವಾಗ ಹ್ಯಾಂಗಿಂಗ್ ಬೀಗಗಳ ಬದಲು ಡೋರ್ ಲಾಕ್‌ಗಳನ್ನು ಬಳಸುವುದು ಸುರಕ್ಷಿತ. ಹ್ಯಾಂಗಿಂಗ್ ಬೀಗಗಳು ಮನೆಯವರು ಇಲ್ಲದಿರುವುದನ್ನು ಕಳ್ಳರಿಗೆ ಸೂಚಿಸುತ್ತವೆ. ಚಿನ್ನಾಭರಣ ಹಾಗೂ ನಗದು ಹಣವನ್ನು ಬ್ಯಾಂಕ್ ಲಾಕರ್‌ನಲ್ಲಿ ಇರಿಸುವುದು ಉತ್ತಮ. ಆರ್ಥಿಕವಾಗಿ ಸಾಮರ್ಥ್ಯವಿರುವವರು ಮನೆ ಹಾಗೂ ರಸ್ತೆಯ ಭಾಗ ಕಾಣುವಂತೆ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಿದರೆ ಅಪರಾಧಿಗಳನ್ನು ಪತ್ತೆಹಚ್ಚಲು ಅನುಕೂಲವಾಗುತ್ತದೆ ಎಂದು ಹೇಳಿದರು.

ದ್ವಿಚಕ್ರ ವಾಹನಗಳನ್ನು ಸುರಕ್ಷಿತ ಸ್ಥಳಗಳಲ್ಲಿ ನಿಲ್ಲಿಸಬೇಕು. ವಾಹನಗಳಿಗೆ ಕಾಲಾನುಸಾರ ವಿಮೆ ಮಾಡಿಸಿಕೊಳ್ಳುವುದು ಅಗತ್ಯ. ವಿಮೆ ಇಲ್ಲದ ವಾಹನ ಕಳವಾದರೆ ಎಫ್‌ಐಆರ್ ದಾಖಲಿಸುವಲ್ಲಿ ಸಮಸ್ಯೆಯಾಗುವ ಸಾಧ್ಯತೆ ಇದೆ. ವೈಯಕ್ತಿಕ ಚಲನವಲನಗಳ ಮಾಹಿತಿಯನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುವುದು ಮನೆ ಕಳ್ಳತನಕ್ಕೆ ಅವಕಾಶ ಮಾಡಿಕೊಡಬಹುದು. ಪೊಲೀಸ್ ಇಲಾಖೆ ವಿತರಿಸಿರುವ ಕರಪತ್ರದಲ್ಲಿರುವ ಮಾಹಿತಿಯನ್ನು ಓದಿ ಸಾರ್ವಜನಿಕರು ಸದಾ ಎಚ್ಚರಿಕೆಯಿಂದಿರಬೇಕೆಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ನೂರಾರು ಸಂಖ್ಯೆಯಲ್ಲಿ ಸಾರ್ವಜನಿಕರು ಭಾಗವಹಿಸಿ ಅಧಿಕಾರಿಗಳೊಂದಿಗೆ ಮುಕ್ತವಾಗಿ ಚರ್ಚಿಸಿದರು. ಇದೇ ವೇಳೆ ಜಾಗೃತಿ ಕರಪತ್ರಗಳನ್ನು ವಿತರಿಸಲಾಯಿತು. ಸಬ್ ಇನ್‌ಸ್ಪೆಕ್ಟರ್ ದಿಲೀಪ್ ಕುಮಾರ್, ಸಿಬ್ಬಂದಿ ಪ್ರಕಾಶ್, ಸಿದ್ದೇಶ್, ರಮೇಶ್, ಮೋಹನ್, ಪ್ರವೀಣ್ ಸೇರಿ ಹಲವರು ಉಪಸ್ಥಿತರಿದ್ದರು.

ನನ್ನನ್ನು ಜೈಲಿಗೆ ಕಳುಹಿಸುವ ಪ್ರಯತ್ನ

» ಮೊದಲನೇ ಪುಟದಿಂದ

ರೂಪಿಸಲಾಗಿತ್ತು. 2007ರ ಜೂನ್ 11ರಂದು ಕಂದಾಯ ಸಚಿವರಾಗಿದ್ದ ಆರ್.ಅಶೋಕ್ ಅವರ ಅವಧಿಯಲ್ಲಿ ಮಂಡ್ಲಳ್ಳಿ, ವಡರಹಳ್ಳಿ ಸೇರಿ ಹಲವು ಗ್ರಾಮಗಳ ಭೂಮಿಗೆ ಸಂಬಂಧಿಸಿ ದಂತೆ ಬಿಜೆಪಿ-ಜೆಡಿಎಸ್ ಸರ್ಕಾರ ನಿರ್ಧಾರಗಳನ್ನು ಕೈಗೊಂಡಿತ್ತು ಎಂದು ಆರೋಪಿಸಿದರು.

2010ರಲ್ಲಿಬಿ.ಎಸ್.ಯಡಿಯೂರಪ್